ಕೊರವಂಜಿ



Koravanji

ಡಿಸೆಂಬರ್

೧೯೫೦

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ದೂನು

ಶ್ರೀಮತಿ|| ಎಸ್. ನಾಗರತ್ನ

ಶ್ರೀ|| ಹ್ಯಾರಿ

ಶ್ರೀ|| ಅ. ರಾ. ಸೇ.

ಶ್ರೀ|| ಹಾ. ರಾ.

ಶ್ರೀ|| ಕೆ. ಎನ್. ಕಿಟ್ಟ್ಯನ್

ಶ್ರೀ|| ಎಚ್ಚೆಮ್ಪಿ

ಶ್ರೀ|| ಶ್ರೀರಂಗ್

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO BANGALORE MADRAS MADURAI BOMBAY
FAS

ಕೊರವಂಜಿ

A. ANANTHIAH.

ಸಂಪುಟ ೨೩ ಡಿಸೆಂಬರ್ ೧೯೬೦ ಸಂಚಿಕೆ ೯

★ ಕುಹಕಿಡಿಗಳು ★

ಸಂತಾನ ನಿರೋಧ ಸಂಘದವರು, ಮಕ್ಕಳ ದಿನಾಚರಣೆಯನ್ನು ಯಶಸ್ವಿಯಾಗಿ ನಡೆಸಿದರಂತೆ.

* * * * *

ಮದ್ರಾಸಿಗೆ ಚಂಡಮಾರುತ ಬಡಿಯಿತು. ಮೈಸೂರಿಗೆ ಛಾ. ಬ. ಶಾಸ್ತ್ರಿಗಳು ಬರುವರು.

—ಪಕ್ಕಾಪಕ್ಕಾದ ಸುದ್ದಿಗಳು ಪತ್ರಿಕೆಯಲ್ಲಿ.

* * * * *

ನ್ಯಾಯಾಸ್ಥಾನದಲ್ಲಿ ಕವಿಯೊಬ್ಬನು ತನ್ನ ಅಹವಾಲನ್ನು ಪದ್ಯದಲ್ಲೇ ಹೇಳಿಕೊಂಡನಂತೆ.

—ಆದರೂ ಗದ್ಯದಲ್ಲೇ ಶಿಕ್ಷೆ ವಿಧಿಸಲಾಯಿತಂತೆ!

* * * * *

ಖಾದಿ ಜುಬ್ಬಗಳನ್ನು ಯಾಕೆ ನಮ್ಮ ಪುಢಾರಿಗಳು ಹಾಕ್ತಾರೆ ಅಂತ ಈಗ ಗೊತ್ತಾಯ್ತು.

—ಅವುಗಳಲ್ಲಿ ಜೇಬುಗಳ ಬದಲು ಭಾರೀ ಜೋಳಿಗೆಗಳೇ ಇರುತ್ತವೆ.

* * * * *

ಕಂಡವರು ಕೊಟ್ಟ ಅಮೃತಕ್ಕಿಂತಲೂ, ಸಂಪಾದಿಸಿದ ಗಂಜಿ ರುಚಿ ಎಂದರಂತೆ ಕವಿಗಳು

—ಹೇಳಿದರೆ ಹೇಳಿಕೊಳ್ಳಲಿ ಎಂದು ಮೊರಾರ್ಜಿಯವರು ಹೇಳಿದರಂತೆ!

ಬಲು ಜಂಭ ಪಡುವ ರಾಜಕುಮಾರಿಯ ಪಾತ್ರವನ್ನು ವಹಿಸಲು ನಟಿಯರನ್ನು ಹುಡುಕುತ್ತಿದ್ದಾರಂತೆ.

—ಯಾಕೆ? ಅಷ್ಟು ಕಷ್ಟ!! ನಮ್ಮ ಆಸ್ಪತ್ರೆಯ ಯಾವ ನರ್ಸ್ ಆದರೂ ಪಾತ್ರವಹಿಸಬಲ್ಲಳು!!

* * * * *

ಊನು ಅವರು ನೆಹ್ರೂಜೀಯವರ ಹತ್ತಿರ ಮಾತನಾಡಿದಾಗ ಚೀಣಾ ವಿಷಯ ಕೂಡ ಊನ ಅಂತ ಹೇಳಲಿಲ್ಲವಂತೆ.

* * * * *

ರಷ್ಯಾಕ್ಕೆ ಹೋದವರೊಬ್ಬರು ಪುಳ್ಳಂಗಾಯಿ ಉಂಡೇಗಳನ್ನ ತೆಗೆದುಕೊಂಡು ಹೋಗಿ ಅಲ್ಲಿನವರಿಗೆ ಹಂಚಿದರಂತೆ-

—ಮೊದಲೇ ತಂದು ಕೊಟ್ಟಿದ್ದರೆ ಇದನ್ನೇ ಚಂದ್ರನ ಮೇಲೆ ಬಾರಿಸ್ತಾ ಇದ್ದೆವಲ್ಲಾ! ಆಗಲಾದರೂ ಒಡೀತಿತ್ತೇನೋ ಎಂದು ಅವರು ಹಲುಬಿದರಂತೆ!!

* * * * *

ಇಂಗ್ಲೆಂಡು ನನ್ನ ಎರಡನೆಯ ಮನೆ ಎಂದು ಅಲ್ಲಿನ ಭಾರತದ ಹೈ ಕಮಿಷನರವರು ಉದ್ಗಾರ ತೆಗೆದರಂತೆ-

—ಅರ್ಥವಾಯಿತು.

* * * * *

ಜಪಾನಿನ ನೂತನ ಸಾರ್ವಜನಿಕ ಚುನಾವಣೆಗಳಲ್ಲಿ ಅಮೆರಿಕನ್ನರು ಗೆದ್ದರು

—ಎಂದು ಟಾಸ್ ವರದಿ ಮಾಡಿಲ್ಲವಂತೆ-ಇನ್ನೂ.

* * * * *

ಮಾನ್ಯ ಸಚಿವರು ಪರಿವಾರದೊಡನೆ ನಮ್ಮ ಸತ್ಕಾರಕೂಟಕ್ಕೆ ಬಿಜಯ ಮಾಡಿದರು-

—ಸಂತೋಷ ಕೂಟವು ಕೂಡಲೇ ಮುಕ್ತಾಯಗೊಂಡಿತು, ಅಲ್ಲವೇ?

* * * * *

ನನ್ನ ಮೌಲ್ಯವನ್ನೆಲ್ಲಾ ಪ್ಯಾರಿಸ್ಸಿನ ಹೋಟಲಲ್ಲಿ ಕಳೆದುಕೊಂಡೆ ಎಂದು ನಮ್ಮೂರಿನ ಹೆಣ್ಣು ಪ್ರವಾಸಿಯೊಬ್ಬರು ಹೇಳಿದರೆಂದು ಪತ್ರಿಕಾವರದಿ.

—ಆಹ್ಣಾ!!

* * * * *

ಇಟಲಿಯಲ್ಲಿ ಬಲು ಆದರದ ಸ್ವಾಗತ ದೊರಕುವುದಂತೆ, ಅತಿಥಿಗಳನ್ನು ಮುದದಿಂದ ತಬ್ಬಿಕೊಂಡೇ ಸ್ವಾಗತಿಸುತ್ತಾರಂತೆ.

—ಅತಿಥಿಗಳು ಅತಿಥೇಯರ ಕೈಗಳನ್ನು ಭದ್ರವಾಗಿ ಹಿಡಿದುಕೊಂಡರೆ ಒಳಿತಂತೆ, ಇಲ್ಲದೇ ಇದ್ದರೆ ಜೇಬುಗಳು ಖಾಲಿಯಾಗಬಹುದಂತೆ.

ಕೊರವಾವಲೋಕನ

" ಒಂದು ಚೂರು ಕಜ್ಜಾಯಕ್ಕಾಗಿ ಎರಡು ಹೊಟ್ಟೆಗಿಲ್ಲದ ಬೆಕ್ಕುಗಳು ಜಗಳ ಕಾಯುಕ್ಕೆ ಶುರು ಮಾಡಿದುವಂತೆ. ಕಡೆಗೆ ನ್ಯಾಯ ಒಪ್ಪಿಸುಕ್ಕೆ ಕೋತಿಯೊಂದನ್ನು ನೇಮಿಸಿಕೊಂಡವಂತೆ. ತಕ್ಕಡಿ ಹಿಡಿದುಕೊಂಡು ಕೂತ ಕೋತಿ, ' ಈ ಭಾಗ ಹೆಚ್ಚು ಭಾರ ' ಅಂತ ಒಂದು ಚೂರು ಮುರಿದು ತಾನೇ ತಿಂದು, ' ಆ ಕಡೆ ಭಾರ ಹೆಚ್ಚು ಬಿತ್ತು ' ಅಂತ ಆ ಕಡೆಯಿಂದ ಒಂದು ಚೂರು ಮುರಿದು ತಿನ್ನುವುದಕ್ಕೆ ಆರಂಭಿಸಿತಂತೆ. ಕಡೆಗೆ ಕೋತಿ ಕೈಲಿ ತಕ್ಕಡಿ ಉಳೀತಂತೆ. ಬೆಕ್ಕುಗಳು ಬೆಪ್ಪಾಗಿ ಕೂತಿದ್ದುವಂತೆ, ಕಜ್ಜಾಯ ಕೋತಿ ಹೊಟ್ಟೇಲಿತ್ತಂತೆ.

ಇಬ್ಬರ ಜಗಳ ಮೂರನೆಯವನಿಗೆ ಲಾಭ "

ಅಂತ ಈ ಕತೇನ ಕೇಂದ್ರ ಪಾರ್ಲಿಮೆಂಟಿನ ಬೋರ್ಡಿನಿಂದ ಬಂದಿದ್ದ ಹಿರಿಯ ನಾಯಕರು, ನಮ್ಮ ಪಕ್ಷದ ಶಾಸಕರ, ಪಕ್ಷದ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರಂತೆ. ' ಒಳಜಗಳ ಬಿಡಬೇಕು ' ಅಂತ ಉಪದೇಶ ಮಾಡಿದರಂತೆ.

ಆಗೊಬ್ಬ ಹಳ್ಳಿ ಪ್ರತಿನಿಧಿ ಎದ್ದು ನಿಂತುಕೊಂಡು " ಸೋಮಿ ! ಹಂಗೆಲ್ಲಾ ಅಳೀ ಕತೆ ಹೇಳಿ ಬೆದರಿಕೆ ಹಾಕಬೇಡಿ. ನಾವಿಬ್ಬರು ಜಗಳ ಹಾಕಿದ್ವಿ ಅಂದರೆ, ಲಾಭ ಹೊಡೀಲಿಕ್ಕೆ ಮೂರನೇವನು ಇರಬೇಕಲ್ಲ ! ಅದೇ ಇಲ್ಲ !! ಅಂದಮ್ಯಾಗೆ ಯಾತರ ಹೆದ್ರಿಕೆ ನಂಕೆ ! ನಮ್ದೊಂದೇ ಪಕ್ಷ ಇರೋದು. ಬೇಕಾದ ಹಾಗೆ ಗುದ್ದಾಡ್ತೀವಿ " ಎಂದು ಹೇಳಿದನಂತೆ.

ಕೇಂದ್ರದ ನಾಯಕರು ತಬ್ಬಿಬ್ಬಾದರಂತೆ !!

* * * *

ಸೂರತ್ತಿನಲ್ಲಿ ಸಾರ್ವಜನಿಕನೊಬ್ಬ ಸರಿಗೆ ಪಂಚೆಯನ್ನು ಕೊಳ್ಳಲು ಅಂಗಡಿಗೆ ಹೋದನಂತೆ. ಸರಿಗೆಗೆ ಸೂರತ್ತು ಪ್ರಸಿದ್ಧಿಯಲ್ಲವೇ ? ಪಂಚೆಯ ಅಂಚನ್ನು ಹಿಡಿದು ನೋಡಿ, ' ಇದು ಬಲು ಪಸಂದಾಗಿದೆ, ಕಣ್ಣಿಗೆ ಇಂಪಾಗಿದೆ, ಕಂಡವರು ತಿರುಗಿ ನೋಡುವ ಹಾಗೆ ಡಿಸೈನಾಗಿದೆ ' ಎಂದು ಸಾರ್ವಜನಿಕ ಮೆಚ್ಚಿ ಹೇಳಿದನಂತೆ. ಸ್ವಲ್ಪ ಹೊತ್ತಿನಲ್ಲಿ ಅಂಚಿನ ಆ ಕಡೆ ನೋಡಿದನಂತೆ. " ಇದು ಯಾಕ್ರೀ ಹೀಗಿದೆ ? ತರಿತರಿಯಾಗಿ ಅವಲಕ್ಷಣವಾಗಿದೆಯಲ್ಲ್ರೀ " ಎಂದು ಕೇಳಿದನಂತೆ.

" ಪಂಚೆ ಉಟ್ಟುಕೊಂಡರೆ ಅಂಚಿನ ಹೊರರೂಪು ಕಾಣಿಸೋ ಹಾಗೆ ಉಟ್ಟುಕೊಳ್ಳಬೇಕು, ಕಂಡವರು ಮೆಚ್ಚುತ್ತಾರೆ. ತಲೆಕೆಳಕಾಗಿ, ತಿರುಗುಮುರುಗ ಯಾರಾದರೂ ಪಂಚೆ ಉಟ್ಟುಕೊಳ್ಳುತ್ತಾರೆಯೇ " ಎಂದು ಅಂಗಡಿಯವನು ವಿಶದೀಕರಿಸಿದನಂತೆ.

" ಇರಬಹುದಪ್ಪಾ, ಆದರೆ ಪಂಚೆ ಉಟ್ಟುಕೊಂಡವನಿಗೆ, ಹೊರಗೆ ಕಾಣಿಸದೆ ಇದ್ದರೂ, ಈ ಪಂಚೆ ಉಟ್ಟರೆ ಒಳಬೇನೆ ತಪ್ಪಿದ್ದಲ್ಲ" ಅಂದನಂತೆ ಸಾರ್ವಜನಿಕ.

—ಅತ್ತಕಡೆ—

ಅವತ್ತೇ ರಾಜಾಜಿಯವರು ಸೂರತ್ತಿನಲ್ಲಿ ಭಾರಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಆಳುವ ಸರ್ಕಾರದ ಅಳುಕುಗಳನ್ನೆಲ್ಲಾ ವಿಶದವಾಗಿ ತೋರಿಸಿದರಂತೆ. ಒಳಬೇನೆಗಳನ್ನೆಲ್ಲಾ ಹೃದಯಂಗಮವಾಗಿ ವಿವರಿಸಿದರಂತೆ.

—ಇತ್ತಕಡೆ—

ಮೊರಾರ್ಜಿಯವರು ಸೂರತ್ತಿನಲ್ಲಿ ಭಾರಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಆಳುವ ಸರ್ಕಾರದ ಥಳುಕು ಬೆಳಕುಗಳನ್ನೆಲ್ಲಾ ವಿಶದವಾಗಿ ತೋರಿಸಿದರಂತೆ. ತಾವೇ ಕಟ್ಟಿದ ಸ್ವಗೃಹ ಪ್ರವೇಶ ಮಾಡುವಾಗ ಅಲ್ಪಸ್ವಲ್ಪ ಬೇನೆ ಇದ್ದರೂ ಅದೂ ಹಿತಕರವಾಗಬಹುದು ಎಂದು ಮನಮುಟ್ಟುವಂತೆ ವಿವರಿಸಿದರಂತೆ.

ಸಾರ್ವಜನಿಕರಿಗೆ ಸಂಶಯ ಬಂತಂತೆ, ಎರಡೂ ಭಾಷಣಗಳನ್ನು ಕೇಳಿ. ಸರಿಗೆ ಅಂಚಿನ ಪಂಚೆಯ ಎರಡೂ ಮುಖಗಳನ್ನು ನೋಡಿ.

ಸಂಶಯವನ್ನು ಪರಿಹರಿಸಿಕೊಳ್ಳುವ ಬುದ್ಧಿಶಕ್ತಿಯಿಲ್ಲದೆ ಸಾರ್ವಜನಿಕನು, ಪಂಚೆ ಕೊಂಡುಕೊಳ್ಳದೆ, ಉಡದೆ, ನಡೆದೇ ಬಿಟ್ಟನಂತೆ!

* * * *

ಆಯುಷ್ಯರೇಖೆಯ ಪ್ರಮಾಣದಿಂದಾಗಿ ೧೨–೧೩ನೆ ವಯಸ್ಸಿನಲ್ಲಿ ಸಣ್ಣದೊಂದು ದ್ವೀಪ ಕಾಣುತ್ತಾ ಇದೆ. ಆದರೆ ದ್ವೀಪದಿಂದ ಒಂದು ಸಣ್ಣ ಗೆರೆ ಚಂದ್ರನ ದಿಬ್ಬದ ತನಕ ಹಾದುಹೋಗುತ್ತಿದೆ. ಅಂದರೆ ನಿಮಗೆ ಆ ವಯಸ್ಸಿನಲ್ಲಿ "ನೀರಿನಲ್ಲಿ ಗಂಡ" ಆಗೇ ಇರಬೇಕು ಎಂದು ಹಾಸ್ಯಗಾರನೊಬ್ಬ ಬೆಳೆದವರ, ಹೇಗೋ ಬಾಳಿದವರ ಸಂತೋಷಕೂಟದಲ್ಲಿ, ಒಬ್ಬಾಕೆಯ ಅಂಗೈ ನೋಡಿ ಸಾಮುದ್ರಿಕ ಭವಿಷ್ಯವನ್ನು ಹೇಳಿದನಂತೆ.

ಸಂತೋಷಕೂಟದಲ್ಲಿ, ನೆರೆದಿದ್ದವರ ಪೈಕಿ ವೈನೆರೆದು ಮೂವತ್ತು ವರ್ಷಗಳಾದರೂ ಒಂಟಿಯಾಗಿಯೇ ಇದ್ದ ಮಹಿಳೆಯರೂ ಇದ್ದರಂತೆ. ಕೆಟ್ಟ ಕನಸು ಕಂಡಂತೆ ಕಾಣುವವರೂ ಇದ್ದರಂತೆ. ಬಲು ಕಷ್ಟ ಕೊಡುವ ರೋಗಗಳಿಂದ ಪೀಡಿತರಾದ ಸ್ತ್ರೀಮಂತರೂ ಇದ್ದರಂತೆ. ಅಂಗೈ ಮುಂದಿಟ್ಟು ಭವಿಷ್ಯ ಕೇಳಿದ ವಯಸ್ಕ ಶ್ರೀಮಂತಹೆಣ್ಣು ಕೆಟ್ಟ ಕನಸಿನಂತೆ ಕಾಣುತ್ತಲೂ ಇದ್ದಳು, ಉಬ್ಬಸರೋಗದಿಂದ ನರಳುತ್ತಲೂ ಇದ್ದಳು, ಒಂಟಿಯಾಗಿಯೂ ಇದ್ದಳು. ಬಾಳಿನ ಮೂವತ್ತೂ ವರ್ಷಗಳಲ್ಲಿ ಬಾಳಿದವರನ್ನು ಕಂಡು, ಅವರ ಸುಖ ದುಃಖಗಳನ್ನು ಕಂಡು, ತನ್ನ ಕಷ್ಟ ನಷ್ಟಗಳೆಲ್ಲಾ ಒಳ್ಳೆಯದಕ್ಕೇ ಅಂದು ಅರಿತು ನಗುನಗುತ್ತಲೇ ಇದ್ದಳು.

ತಿಂಡಿ ತಿನಸುಗಳು ಸಂತೋಷಕೂಟದಲ್ಲಿ ಸಾಕಷ್ಟು, ಅಭಿರುಚಿಗೆ ತಕ್ಕಂತೆ ಇದ್ದುವು. ದಾಹವಡಗಿಸುವ, ಚಪಲವನ್ನೆಚ್ಚರಿಸುವ ಪಾನೀಯಗಳೂ ಬೇಕಷ್ಟು ಇದ್ದುವು—ಶ್ರೀಮಂತರ, ಸ್ತ್ರೀಮಂತರ ಸಂತೋಷಕೂಟವಲ್ಲವೇ?—

ಕೂಟದಲ್ಲಿ ಅವರಿವರು ಆಡಿದ, ಅರ್ಥವಿಲ್ಲದ ಹಾಗೂ ಅಪಾರ್ಥವಿರದ, ಮಾತುಕತೆಗಳನ್ನು ಕೇಳಿ, ಕುಹಕವಾಡಿ, ಬಿಸಿ ಉತ್ತರವನ್ನು ಕೊಡುತ್ತಾ, ಆಕೆ ಬಿಕ್ಕಿ ಬಿಕ್ಕಿ ನಗಿಸುತ್ತಿದ್ದಳು; ತಾನೂ ನಗುತ್ತಿದ್ದಳು. ಈಕೆಯ ಬಾಯಿನ ಅತ್ತ ಇತ್ತ ತುದಿಗಳನ್ನು ಕಿವಿಯ ತನಕ ಬ್ರಹ್ಮ ಸೃಷ್ಟಿಸಿದನೋ ಎಂದು ಅನುಮಾನ ಬರುವಂತೆ ಕೇಕೇ ಹಾಕುತ್ತಾ ನಗುತ್ತಿದ್ದಳು, ನವಿಲಿನಂತೆ.

ಆದರೆ, ಅವತ್ತು, ಆಗ—

ಹಾಸ್ಯಗಾರನು ಅಂಗೈ ನೋಡಿ, ಭವಿಷ್ಯ – ಭೂತ – ವರ್ತಮಾನಗಳನ್ನು ಕುಚೋದ್ಯದಿಂದ ಹೇಳಿದಾಗ, ಆಕೆ ತಟಕ್ಕನೆ ನಗು ನಿಲ್ಲಿಸಿದಳು, ಆಲೋಚನಾ ಮಗ್ನಳಾದಳು. ಸ್ಮರಣೆಗಳ ಸ್ಮೃತಿ ಶ್ರುತಿಯಲ್ಲಿ ಸ್ಥಬ್ಧಳಾದವಳಂತೆ ಮೂಗಿಯಾದಳು. ಗಂಭೀರೆಯಾದಳು.

ಇನ್ನಾರೋ ಇನ್ನೇನೋ ಅಂದರು. ಮಾತು ಬದಲಾಯಿಸಿತು. ವಾತಾವರಣ ಹಗುರವಾಯಿತು.

ಆಕೆ ಹಾಸ್ಯಗಾರನನ್ನು ಆಮೇಲೆ ಗುಟ್ಟಾಗಿ ಕೇಳಿದಳು. "ಅಪ್ಪಾ! ಅಂಗೈ ರೇಖೆಯಲ್ಲಿ ಅದೆಲ್ಲಾ ಗೊತ್ತಾಗುತ್ತೇನಪ್ಪಾ" ಎಂದು.

"ಹಾಗಂದರೇನು ತಾಯಿ?" ಎಂದ ಹಾಸ್ಯಗಾರ.

"ನನಗೀಗ ನಾಲ್ವತ್ತೈದು ವರ್ಷ. ಮೂರು ಸಂಸಾರಗಳನ್ನು ಸುಖವಾಗಿ ನಡೆಸುವಷ್ಟು ಸಂಪಾದನೆಯಿದೆ, ಆದರೆ ನಾನು ಒಂಟಿ. ಕನ್ನಡಿ ನೋಡಿದಾಗೆಲ್ಲಾ ಹಾಗೆ ಇರುವುದರ ಕಾರಣ ತಿಳಿದಿದೆ. ಉಬ್ಬಸದ ರೋಗ ಬೇರೆ. ಬಾಳ ಹುರುಳೆಲ್ಲಾ ಅರ್ಥವಾಗಿದೆ.

ಆದರೆ ೧೩–೧೪ಳ ವರ್ಷ ವಯಸ್ಸಾಗಿದ್ದಾಗ, ನಮ್ಮ ಬಂಗಲೆ ಎದುರಿನ ನೀರಿನ ತೊಟ್ಟಿಯಲ್ಲಿ ಒಮ್ಮೆ ಬಿದ್ದಿದ್ದೆ. ನೀರೇನೂ ಹೆಚ್ಚಾಗಿರಲಿಲ್ಲ. ಆದರೂ ಹೆದರಿ ಏಳಲು ಆಗದೆ ಆರು ಅಂಗುಲ ನೀರಿನಲ್ಲೇ ಮುಳುಗಿದ್ದೆ. ೭೫ರ ಪ್ರಾಯದ ನನ್ನ ಕಕ್ಕ ತಟಕ್ಕನೆ ಬಂದು, ನನ್ನನ್ನು ಹಿಡಿದು ಎತ್ತಿ ಹೊರಕ್ಕೆ ತಂದು ರಕ್ಷಿಸಿದ. ನನ್ನ ಎಳೆಯ ಮನಸ್ಸಿನಲ್ಲಿ ಆಗ ಕಂಡ ಅವನ ಮುಖ, ನನಗಾಗಿ ಅವರ ಕಾತುರತೆ, ಅವನ ವಿಶ್ವಾಸ ಎಲ್ಲವೂ ಕಲ್ಲಿನಲ್ಲಿ ಕಡೆದಂತೆ ಸ್ಥಿರವಾಗಿ ನಿಂತಿತು. ಇಂದಿನ ತನಕ ನಾನು ಒಂಟಿ. ಆದರೆ ಗಂಡ ದೊರೆವುದಾದರೆ ಆತ ದೊರೆಯಲಿ ಎಂದೇ ನನ್ನ ಹಂಬಲ. ಅವನೇ ನೀರಿನಿಂದಾಗಿ ದೊರೆತ ಗಂಡ ನನಗೆ. ಯಾರಿಗೂ ಇದು ಗೊತ್ತಿಲ್ಲ. ನಿಮಗೆ ಅಂಗೈ ರೇಖೆ ನೋಡಿದಾಗ ಇದೆಲ್ಲಾ ಹೇಗೆ ತಿಳಿಯಿತು? ಅಷ್ಟು ಚತುರ ಸೂಕ್ಷ್ಮವೇ ಸಾಮುದ್ರಿಕ ಶಾಸ್ತ್ರ" ಎಂದು ಆಕೆ ಕೇಳಿದಳು.

ಆಗ ಹಾಸ್ಯಗಾರ ನುಡಿದನಂತೆ. "ಗಂಡ ಅಂದರೆ ಪ್ರಾಣಕ್ಕೇ ಸಂಚು ತರುವ ವಸ್ತು, ಎನ್ನುವ ಅರ್ಥದಲ್ಲಿ ನಾನು ನುಡಿದೆ. ಗಂಡ ಅಂದರೆ ಪ್ರಾಣಕ್ಕೇ

ಕೆಂಚು ತರುವ ವಸ್ತು ಅಂತ ನೀನರ್ಥ ಮಾಡಿಕೊಂಡೆ ಮಗಳೇ! ಅದೇ ಭವಿಷ್ಯ ಕಾರರ ಸುಖ ಭವಿಷ್ಯದ ಗುಟ್ಟು" ಎಂದು.

*　　*　　*　　*

ಬಿಳಗಿರಿ ರಂಗಿನ ಕಾಡಿನಲ್ಲಿ ಒಂಟಿಸಲಗ ಒಂದಿತ್ತಂತೆ, ಗುರುಕೃಪೆಯಿಂದ, ಪೂರ್ವ ಪುಣ್ಯದಿಂದ. ಸುಮಾರು ದಿನಗಳ ಹಿಂದೆ ಅದು ಗುಂಪಿನ ನಾಯಕನಾಗಿತ್ತಂತೆ. ಆದರೆ ಭಾತಿಯ ಮಕ್ಕಳು ತನ್ನ ಮಕ್ಕಳು ಬಲಿತು, ಬೆಳೆದು, ಭೂಂಕಾರ ಮಾಡಿದಾಗ, ಅಹಂಕಾರವನ್ನ ಮರೆಯಲಾಗದೇ, ಉತ್ಸಾಹದ ಪ್ರಾಯದ ಕೊಂಬು ಮುರಿದಿದ್ದರೂ, ಕುಸ್ತಿಗಿಳಿದು, ಮಣ್ಣುಮುಕ್ಕಿ, ಒಂಟಿಯಾಗಿ, ಒಂದೇ ಬಾಳ ನಡೆಸಿತಂತೆ. ಕಹಳೆ ಕೂಗುವುದಂತೆ, ಚೀತ್ಕಾರದ ದನಿಯಲ್ಲಿ.

—ಒಂಟಿಸಲಗ ಎನ್ನುವ ಮರ್ಯಾದಾರ್ಹವಾದುದನ್ನು ಮರ್ತ್ಯಲೋಕದಲ್ಲಿ ಬಾಳ ಬೆಳಗಿಸುವ ಆಶೆ ಇಟ್ಟ ಆಂಗ್ಲೇಯರು Rogue ELEPHANT—ಅಂತ ಅನ್ನುತ್ತಾರೆ. ಆಂಗ್ಲಭಾಷೆಯಲ್ಲಿ ಮೊದಲ ಮಾತಿಗೆ, ಮೊದಲ ಶಬ್ದಕ್ಕೆ, ಮೊದಲ ಧ್ವನಿಗೆ ಒತ್ತುಕೊಡುವುದು ಸಹಜ. ಅಂದರೆ Rogue ಶಬ್ದಕ್ಕೇ ಪ್ರಾಧಾನ್ಯ. ತನ್ನ ಕಿರಿತನವನ್ನು ತಾನರಿಯದವ, ROGUE ಅಂತ.

ಇದೆಲ್ಲಾ ಮನಸ್ಸಿಗೆ ಬಂತು, ಚೀಣಾ ಇಂಡಿಯಾ ಕುರಿತ ವಾಗ್ಯುದ್ಧವನ್ನು ನಮ್ಮನಮ್ಮವರ ಪ್ರತಿನಿಧಿಗಳ ಸಭೆಯಲ್ಲಿ ಮೊನ್ನೆ ಆಚಾರ್ಯರು, ಮಕ್ಕಳ ಮೂರ್ತಿಯಾದವರು, ಪರಸ್ಪರ ವಿಶ್ವಾಸ, ಮರ್ಯಾದೆಯಿಂದ, ಮಮತೆಯಿಂದ, ಸತ್ಯವಾಗಿ ನಡೆಸಿದಾಗ.

ನಮ್ಮ ಬಲವನ್ನು ನಾವು ಬೆಳೆಸಿ; ಬೆಳಗಿಸಬೇಕು ಎಂದು ಒಂಟಿಯಾಗಿ ನಿಂತ ಆಚಾರ್ಯರು ಅಂದರು. ನಮ್ಮ ಗುಂಪನ್ನು, ಸಮಾಜವನ್ನು, ದೇಶವನ್ನು, ಮಾನವೀಯತೆಯನ್ನು ಬೆಳೆಸಬೇಕು ಎಂದು ಮಕ್ಕಳ ಮೂರ್ತಿಯಾದ, ನಾಯಕರು.

—ಆಚಾರ್ಯರು ಅಹಂಕಾರ ಕಳೆದುಕೊಂಡಿಲ್ಲ—

—ಮಕ್ಕಳ ಮೂರ್ತಿಗೆ ಅರಿವು ಮೂಡಿಲ್ಲ—

—ಗುಂಪಿಗೆ ಬುದ್ಧಿಯಿಲ್ಲ—

ಅಂದಮೇಲೆ—ಉತ್ತರ—ಗೊತ್ತೇ ಇದೆಯಲ್ಲಾ—!!

—ಹುಚ್ಚು........ಡೇ........ಮದುವೇಲಿ ಉಂಡವನೇ ಜಾಣ!!!

*　　*　　*　　*

ವೈಟಮಿನ್ ಡಿ

"ಹಳ್ಳೀ ಗೌಡರೆಲ್ಲ ಬೆಳಗ್ಗಿನ ಹೊತ್ತು ಬಿಸಿಲು ಕಾಯಿಸಿಕೊಳ್ಳುತ್ತ ಗುಡ್ಡೆ ಗುಡ್ಡೆಯಾಗಿ ಕೂತಿರುತ್ತಾರಲ್ಲ ಏನನ್ಯಾಯ ಇದು? ತಲೆಗೆ ದೊಡ್ಡ ರುಮಾಲು ಸುತ್ತಿಕೊಂಡು ಹಳೇಕೋಟಿನ ಗುಂಡಿಗಳನ್ನೆಲ್ಲ ಹಾಕಿಕೊಂಡು ರಚ್ಚೆಕಟ್ಟೆ, ಚಾವಡಿ, ದೇವಸ್ಥಾನದ ಪ್ರಾಕಾರಗಳಲ್ಲಿ ಕೂತಿರುತ್ತಾರಲ್ಲ ಇವರೆಲ್ಲ ಮೈಬಗ್ಗಿಸಿ ಕೆಲಸ ಮಾಡುವುದು ಯಾವಾಗ, ಬೆಳೆ ತೆಗೆಯುವುದು ಯಾವಾಗ, ದೇಶ ಸುಭಿಕ್ಷವಾಗುವುದು ಯಾವಾಗ? ಹೀಗೆ ಸೋಮಾರಿಗಳಾಗಿ ಬೆಳಗ್ಗಿನ ಬಿಸಿಲು ಕಾಯೋರನ್ನ ಏನನ್ನೋಣ? ಇವರಿಗೆ ದೇಶಾಭಿಮಾನವಿದೆಯೇ? ತಾವೇ ಸುಖವಾಗಿರಬೇಕೆಂಬ ಅಭಿಲಾಷೆ ಇದೆಯೇ?"

"ಇಂಥವರೆಲ್ಲ ಚೈನಾದಲ್ಲಿದ್ದರೆ ಏನು ಗತಿ? ಇಂಥವರು ಮಾವೊ ಕಣ್ಣಿಗೆ ಬಿದ್ದರೆ ಇವರ ಗತಿಯೇನು? ಸಕಾಲದಲ್ಲಿ ಎದ್ದಲ್ಲವೇ ಎತ್ತುಗಳನ್ನು ಕಟ್ಟಿಕೊಂಡು ಹೋಗಿ ಉಳಬೇಕಾದುದು? ಸಕಾಲದಲ್ಲಲ್ಲವೇ ಬೀಜದ ಕಾಳು ತರಲು ಸರ್ಕಾರಿ ಫಾರಂಗೆ ಹೋಗಬೇಕಾದದು? ಸೀಮೆಗೊಬ್ಬರಕ್ಕೆ ಅಪ್ಲಿಕೇಷನ್ ಹಾಕುವುದು? ಸಕಾಲದಲ್ಲಲ್ಲವೇ ಸಿಮ್ಲಾದಿಂದ ಬೀಜದ-ಆಲೂಗಡ್ಡೆ, ಪಾಕಿಸ್ಥಾನದಿಂದ ಬೀಜದ ಈರುಳ್ಳಿ-ಬೆಳ್ಳುಳ್ಳಿ, ಕೊಯಮುತ್ತೂರಿನಿಂದ ಬೀಜದ-ಕಬ್ಬು ಇವನ್ನೆಲ್ಲ ತರಿಸಿಕೊಳ್ಳುವುದು? ಅದು ಬಿಟ್ಟು ಹೀಗೆ ಬೆಳಗ್ಗಿನ ಬಿಸಲಿಗೆ ಬೆನ್ನುಕೊಟ್ಟುಕೊಂಡು ತಮಟೆ ಕಾಯಿಸುವಂತೆ ಕೂತರೆ ಗೌಡ ಹೆಗ್ಗಾಡ ಆಗುವುದು ಹೇಗೆ?

"ಕಂದಾಯ ತೆರುವುದಾದರೂ ಹೇಗೆ, ಇವರು? ಮನೆಕಟ್ಟುವುದು ಯಾವಾಗ, ಹೋರಿಗಳನ್ನು ಪುಷ್ಟಿಯಾಗಿ ಬೆಳೆಸಿ ಕೊಳ್ಳೇಗಾಲದ ದನದ ಜಾತ್ರೆಗೆ ಪ್ರದರ್ಶನ-ಮಾರಾಟಕ್ಕೆ ಕೊಂಡೊಯ್ಯುವುದು ಯಾವಾಗ?

"ಸಂತೆ ಧಾರಣೆಗಳನ್ನು ಬಂಧಿಸಿ ಬಿಗಿ ಹಿಡಿಯುವುದು ಯಾವಾಗ? ಹಗೇವು-ಗುಡಾಣಗಳಿಂದ ಎಷ್ಟು ಕಾಳು ಹೊರ ತೆಗೆಯಬೇಕು, ಎಷ್ಟು ದಾಸ್ತಾನ ಮಾಡಬೇಕು ಎಂಬುದನ್ನು ಗೊತ್ತು ಮಾಡುವುದು ಯಾವಾಗ?" ಎಂದೆಲ್ಲ ಪ್ರಶ್ನೆಗಳನ್ನು ಒಮ್ಮೆಯೇ ಕೇಳಲು ಶುರುಮಾಡಿದ, ಒಬ್ಬ ಅರ್ಥಶಾಸ್ತ್ರದ ರಿಸರ್ಚ್ ವಿದ್ಯಾರ್ಥಿ. ತನ್ನ ಥೀಸೀಸ್ ಬರೆಯೋಕೆ ಹಳ್ಳಿ ಹಳ್ಳಿಗೂ ಹೋಗಿ ವಿಷಯ-ಸಾಮಗ್ರಿ ಸಂಗ್ರಹಿಸೋಕೆ ಹೊರಟಿದ್ದ: **ಫೋರ್ಡ್ ಫೌಂಡೇಷನ್ನಿನ ವಿದ್ಯಾರ್ಥಿ ಸಂಪತ್ಕುಮಾರನ್.**

ಅದಕ್ಕೆ ಉತ್ತರ ಕೊಡುವುದಕ್ಕೆ ತರುಣ ಲಿಂಗೇಗೌಡ ತಯಾರಾಗಿದ್ದ! ಅವನು ಫಾರಂ ಫೋರಮ್ಮಿ 'ನವರೊಡನೆ ಡೆಲ್ಲೀಗೆ ಶ್ರೀಮಾನ್ ವೇದಮೂರ್ತಿಯವರ ಜೊತೆಯಲ್ಲಿ ಹೋಗಿ ಬಂದಿದ್ದ. ವರ್ಲ್ಡ್ ಅಗ್ರಿಕಲ್ಚರ್ ಫೇರ್‌ಗೂ ಹೋಗಿಬಂದಿದ್ದ.

"ಪ್ಲಾನಿಂಗು ಪ್ಲಾನಿಂಗು ಅಂತೀರಲ್ಲ ಎಲ್ಲದಕ್ಕೂ ಈಗ, ಅದೇರೀತಿ ನೀವು ಕೇಳಿದ ಎಲ್ಲ ಸಮಸ್ಯೆಗಳ ವಿಷಯವನ್ನೂ ನಾವು, ಹಳ್ಳಿಯವರು, ಪ್ಲಾನ್ ಮಾಡುವುದು ಚರ್ಚಿಸುವುದು ನಿಷ್ಕರ್ಷಿಸುವುದು ಇವೆಲ್ಲ ಈರೀತಿ ಬೆಳಗ್ಗಿನ ಬಿಸಿಲು ಕಾಯಿಸಿಕೊಳ್ಳುತಿರುವಾಗ. ಬಿಸಿಲು ಬೆನ್ನುಮೇಲೆ ಬಿದ್ದರೆ ವೈಟಮಿನ್ ಡೀ ತಯಾರಾಗುತ್ತದಂತೆ, ದನದ ಮೈಯಲ್ಲಿಕೂಡ. ಅದು ಕೊಂಚ ವೃದ್ಧಿಯಾಗುವ ತನಕ ಹೀಗೆ ಬಿಸಿಲಲ್ಲಿ ಕೂತಿರುತ್ತೇವೆ! ಆ ಮೇಲೆ ನಂನಮ್ಮ ಕೆಲಸಕ್ಕೆ ಹೋಗುತ್ತೇವೆ. ರಾತ್ರಿ ಹನ್ನೊಂದು ಗಂಟೆಮೇಲೆ ಬಂದು ನೋಡಿ, ನಾನು ಆಲೂಗಡ್ಡೆ ತೋಟಕ್ಕೆ ಕಪಿಲೆ ನೀರನ್ನು ಎತ್ತುತ್ತಿರುತ್ತೇನೆ. ನನ್ನ ತಮ್ಮ ಎತ್ತುಗಳಿಗೆ ಜೋಳ ತಿನ್ನಿಸುತ್ತಿರುತ್ತಾನೆ!" ಎಂದಂದ.

ಸಂಪತ್ಕುಮಾರನ್ ಹಳ್ಳಿಯಿಂದ ಒಂದು ಗಡಿಗೆ ತುಪ್ಪ (ವೈಟಮಿನ್ ಡೀ ಭರಿತವಾದದ್ದು) ಕೊಂಡುಕೊಂಡು ಪಟ್ಟಣಕ್ಕೆ ಹಿಂತಿರುಗಿದ, ತನ್ನ ಥೀಸೀಸ್ ಬರೆಯೋಕೆ!

— ಡೂನು

"ಇದು ಸಾಧು ಹಸು ಅಲ್ಲ ಕಣೋ!! ಕಾಲ್ಕಟ್ಟಿ ಕರೆಯೋ........!"



[ರಾಜಾಜಿಯವರು ಬೊಂಬಾಯಿಯಲ್ಲಿತ್ತ ಹೇಳಿಕೆ—ಸರಕಾರವು ಪ್ರಜೆಗಳ ಅಡಳಿತದಲ್ಲಿರಬೇಕೆ ವಿನಃ ಪ್ರಜೆಗಳು ಸರಕಾರದ ಅಡಳಿತದಲ್ಲಲ್ಲ.]

ಮಹಿಳಾ ಮನೆ ಕೆಲಸಗಾರರು

ಮಹಿಳಾ ಸಮಾಜದಲ್ಲಿ ಸಂಜೆ ಯಥಾಪ್ರಕಾರದ ಸಭೆ ಸೇರಿದಾಗ ಕಾರ್ಯದರ್ಶಿನಿ ಕಾಮಾಕ್ಷಮ್ಮನವರು, ನೆಲದ ಮೇಲೆ ಬಿದ್ದಿದ್ದ ಹಳೆ ಪೊರಕೇನ ಕಾಲಿನಿಂದ ಪಕ್ಕಕ್ಕೆ ಒದ್ದು, "ಕೆಲಸದೋಳು ರಾಜೀನಾಮೆ ಕೊಟ್ಟು ಹೊರಟುಹೋದಳು. ಬೇರೆ ಕೆಲಸದೋಳು ಸಿಗೋತನಕ, ಕ್ಲಬ್ಬನ್ನು ಮುಚ್ಚಿಬಿಡೋಣ ಅಂತೀನಿ" ಎಂದು ಹೇಳಿದಳು.

"ಯಾಕೆ ರಾಜೀನಾಮೆ ಕೊಟ್ಟಳು? ನೀನೆಲ್ಲೊ ಜಬರ್ದಸ್ತಿ ಮಾಡಿದಿ ಅವಳ ಮೇಲೆ, ಅದಕ್ಕೇ ಹೊರಟುಹೋಗಿದ್ದಾಳೆ. ಸಮತಾವಾದದ ಕಾಲ, ಯಾರ ಮಾತನ್ನು ಯಾರು ಕೇಳ್ತಾರೆ! ನಾವು ಹುಷಾರಾಗಿರಬೇಕು, ವಿನಯವಾಗಿರಬೇಕು, ಮೌನವಾಗಿರಬೇಕು" ಅಂತ ಸಮಾಜದ ಅಧ್ಯಕ್ಷಿಣಿ, ಅಂಬುಜಾಕ್ಷಮ್ಮನವರು ಹೇಳಿ ಕಾರ್ಯದರ್ಶಿನಿಯ ಮೇಲೆ ಸೇಡು ತೀರಿಸಿಕೊಂಡರು.

"ಯಾಕೆ ಬಿಟ್ಟುಹೋದಳು ಗೊತ್ತೆ? ವಿರಾಟ್ ಭವನದದಿಂದ ಕಾಫಿ ತಿಂಡಿ ತರಿಸಬೇಕು ಅಂತ ನೀವು ಅವತ್ತು ಕಮಿಟಿ ಮೀಟಿಂಗ್‌ನಲ್ಲಿ ಒತ್ತಾಯ ಪಡಿಸಲಿಲ್ಲವೇ? ಅದರಂತೆ ಅಲ್ಲಿಂದಲೇ ಕಾಫಿ ತರಿಸ್ತಾ ಇದ್ದೆವು—ಇವರು ತರಿಸೋ ಹೋಟಲ ಕಾಫೀನ ಇವರೇ ಕುಡೀಬೇಕು! ನಂಗೇನು ತೆವ್ಲಾ!! ಬಾದಾಮ್ ಮಂದಿರದಿಂದ ತರಿಸೀವಾ ಅಂತ ಹೇಳಿದರೆ ಕೇಳಾಕಿಲ್ಲ, ಅದಕ್ಕೇ ಹೊಂಟೋಗ್ತೀನಿ- ಅಂತ ಗೊಣಗ್ತಾ ಹೊರಟುಹೋದಳಂತೆ, ರಸ್ತೆ ಅಂಚಲ್ಲಿ ಕಳ್ಳೆಕಾಯಿ ಮಾರ್ತಾಳಲ್ಲಾ ಆಕೆ ಹೇಳಿದಳು" ಎಂದು ಕಾಮಾಕ್ಷಮ್ಮನವರು ಮರುಬಾಣ ಬಿಟ್ಟರು.

ಓಹೋ! ಹೀಗೇ ಬಿಟ್ಟರೆ ಇಲ್ಲೊಂದು ಕುರುಕ್ಷೇತ್ರ ಆಗಬಹುದು ಅಂತ ಉಳಿದ ಮಹಿಳೆಯರಿಗೆ ತೋಚಿದ್ದಿರಬೇಕು. ಅದಕ್ಕೆ ಸುಶೀಲಮ್ಮನವರಂದರು.

"ಈ ಕೆಲಸದೋರೆಲ್ಲಾ ಅತಿಯಾಗಿಬಿಟ್ಟಿದಾರೆ ಅಂದ್ರೆ—ನಮ್ಮನೆಯೋಳು ನೋಡಿ, ದಿನಾಲೂ ತನ್ನ ಆರೂ ಮಕ್ಕಳನ್ನು ಜತೇಲಿ ಕರಕೊಂಡುಬಂದು ವರಾಂಡಾದಲ್ಲಿ ಕೂರಿಸಿ ತಾನು ಕೆಲಸಕ್ಕೆ ಶುರು ಮಾಡ್ತಿದ್ದಳು. ನಮ್ಮ ಯಜಮಾನರ ಬಣ್ಣಾ ಬಟ್ಟತಲೆ ನೋಡಿದ್ದೀರಲ್ಲಾ. ರಸ್ತೆಯೋರೆಲ್ಲಾ 'ಏನು ಸುಶೀಲಮ್ಮಾ! ನಿಮ್ಮ ಯಜಮಾನರ ಮೊದಲನೆ ಹೆಂಡತಿ ಮಕ್ಕಳಾ ಇವೆಲ್ಲಾ! ವರಾಂಡಾದಲ್ಲೇ ಆಡಿಕೊಳ್ಳುತ್ತಿವೆ' ಅಂತ ಅನ್ನೋಕ್ಕೆ ಶುರುಮಾಡಿದರು—ಕೆಲಸದೋಳಿಗೆ ಇದನ್ನು

ಹೇಳಿದರೆ, ಆಕೆ ‘ ನಿಮ್ಮನೇನೂ ಬೇಡ, ನಿಮ್ಮ ಯಜಮಾನರೂ ಬೇಡ ’ ಅಂತ ರೇಗಿಕೊಂಡು ಹೋಗೇಬಿಡೋದೇ! ಮಕ್ಕಳನ್ನು ಅವಳ ಹಿಂದೆ ರವಾನಿಸೋ ಹೊತ್ತಿಗೆ ಸಾಕಾಗಿಹೋಯ್ತಮ್ಮಾ” ಎಂದು ಹೇಳಿದರು.

ಮೀನಾಕ್ಷಮ್ಮನವರು ಹೇಳಲು ಶುರುಮಾಡಿದರು.

ಅಜಂತ ಗಂಟಿನ ಹೆರಳನ್ನು ಮೇಲಕ್ಕೆತ್ತಿ ಕಟ್ಟಿದ್ದಳು, ನನ್ನ ಕಡೇ ಮಗಳು ವೇಂಗಡು. ಯಾವುದೋ ವಾರಪತ್ರಿಕೆಯ ಬೊಂಬೆಗಳನ್ನು ನೋಡಿ, ಸಿಂಗರಿಸಿ ಕೊಂಡಿದ್ದಳು. ಹಣೆಗೆ ಕುಂಕುಮ ಇಟ್ಟು, ದೊಡ್ಡಂಚಿನ ಹ್ಯಾಂಡ್‌ಲೂಮ್ ಸೀರೆ ಉಟ್ಟಿದ್ದಳು. ಖರೋಬಾ ಮಣಿಸರ ಹಾಕಿಕೊಂಡಿದ್ದಳು. ತೋಳ್ತುಂಬ ದೊಡ್ಡಂಚಿನ ಬಿಗಿ ಕುಪ್ಪುಸ ತೊಟ್ಟಿದ್ದಳು.

“ ಯಾಕ್ರಮ್ಮಾ! ದಿನ-ದಿನಕ್ಕೆ ಒಬ್ಬೊಬ್ಬರೂ ಮೂರು-ಮೂರು ಸೀರೆ ಒಗೀಕ್ಕೆ ಹಾಕ್ತೀರಿ! ಹೆಂಗಮ್ಮಾ ಕೆಲ್ಸ ಮಾಡುಕ್ಕೆ ಆಗ್ತದೆ” ಅಂತ ಮನೆ-ಕೆಲಸ ದೋಳು ಜಬರ್ದಸ್ತಿ ಜೋರುಮಾಡ್ತಾ ಮನೆ ತೊಟ್ಟಿತನಕ ಬಂದಿದ್ದಳು, ಹಿತ್ತಲ ಕಡೆಯಿಂದ.

ಆ ವೇಳೆಗೆ ಮೂರನೆ ಮನೆಗೆ ಹೊಸದಾಗಿ ಬಂದಿದ್ದ ಗುಜರಾತಿ ಹೆಂಗಸ ರಿಬ್ಬರು ನಮ್ಮನೆಗೆ ಬಂದರು. ಮುಖ ಶಿಂಡರಿಸಿಕೊಂಡು ರೇಗ್ತಾ ಇದ್ದವಳನ್ನೂ ನೋಡಿದರು ; ತೊಟ್ಟಿ ಆ ತುದಿಯಲ್ಲಿ ಮುಖ ಕೆಂಪೇರಿಸಿಕೊಂಡು ರೇಗ್ತಾ ಇದ್ದ ವೇಂಗಡೂನೂ ನೋಡಿದರು. ಏನು ಅನ್ನಿಸ್ತೋ ಅವರಿಗೆ. ಕೆಲಸದೋಳ ಕಡೆ ತಿರುಗಿ “ ನಮ್ಮನೇಲೂ ಹೀಗೇಮ್ಮಾ, ಮೊನ್ನೆ ಇಲಿ ಬಂದಹಾಗೆ ಕೆಲಸಕ್ಕೆ ಬಂದೋಳು ಈಗ ಹುಲಿಹಾಗೆ ಗರ್ಜಿಸ್ತಾಳೆ. ಇವಳಿಗೆಷ್ಟು-ಸಂಬಳ ಕೊಡ್ತೀರಿ ? ” ಅಂತ ವೇಂಗಡೂ ಕಡೆಗೆ ಕೈಬೆರಳು ತೋರಿಸಿದರು.

ಕೊಠಡಿ ಒಳಗಿನಿಂದ ನಾನು ಹೊರಗೆ ಬಂದು, ವಿಷಯ ವಿವರಿಸಿದೆ ಅನ್ನಿ, ಆ ಗುಜರಾತಿ ಮಹಿಳೆಯರಿಗೆ—ಹಾಗೂ ಕೆಲಸದೋಳ ಕಡೆ ಕಣ್ಣುಹಾಕಿದೆ. ದಿಟವಾಗಲೂ ಅವಳು ತೊಟ್ಟ ರವಿಕೆ, ಉಟ್ಟ ಸೀರೆ, ಮುಖದ ಸಿಂಗಾರ ಎಲ್ಲಾ, ವೇಂಗಡೂಗೆ ಹೋಲಿಸಿ ನೋಡಿದರೆ, ಗುಜರಾತಿ ಹೆಂಗಸರಿಗೆ ಅನುಮಾನ ಬಂದಿದ್ದು ಸಹಜ ಅನ್ನಿಸ್ತು ಅನ್ನಿ !

ಅದಕ್ಕೇ ಅವಳನ್ನ ಕೆಲಸದಿಂದ ವಜಾ ಮಾಡಿಸಿದೆ.

ಎಷ್ಟು ರಾದ್ಧಾಂತ ಮಾಡಿದರು ಅಂತೀರಿ ! ನಮ್ಮ ಯಜಮಾನರು !


ವಾರಕ್ಕೊಬ್ಬಳು ಕೆಲಸಗಾರರು! ಹೀಗೇ ಆದರೆ ಮನೆಗೆಲಸದವರೆಲ್ಲಾ ಸಂಘ ಮಾಡಿಕೊಂಡು, ಷರತ್ತು ಹಾಕುಕ್ಕೆ ಶುರುಮಾಡ್ತಾರೆ, ಅಂತೆಲ್ಲಾ ರೇಗ್ತಾರೆ—ಅವರು ರೇಗಿದ ರಭಸ ನೋಡಿದರೆ ಈಗ ಯಜಮಾನರ ಮೇಲೇ ನನಗೆ ಸಂಶಯ!!

ಸಾವಿತ್ರಮ್ಮನವರು ತಮ್ಮ ಅನುಭವವನ್ನು ವಿವರಿಸಿದರು:

"ನಮ್ಮತ್ತೆ ಗಂಟಲ ಕ್ಯಾನ್ಸರ್‌ನಿಂದ ಸತ್ತುಹೋದುದು ನಿಮಗೆಲ್ಲಾ ಗೊತ್ತಲ್ಲಾ! ಯಾಕೆ ಕ್ಯಾನ್ಸರ್ ಬಂತು ಅಂತೀರಿ. ನಮ್ಮನೆ ಕೆಲಸದೋಳು ಎಂಟು ಗಂಟೆ ಹೊತ್ತಿಗೆ ಬರುತ್ತಿದ್ದಳು, ಅತ್ತೆ ಬಂದಮೇಲೆ ಐದು ಗಂಟೆಗೆ ಬರಬೇಕು ಅಂತ ಅಪ್ಪಣೆ ಆಯ್ತು. ಕೆಲಸದೋಳು ಬೆಳಗಿನ ಝಾವ ಐದಕ್ಕೇ ಬಂದು, ಅಮ್ಮಾವ್ರೇ ಅಂತ ಕಿರುಚುಲುದನಿಯಲ್ಲಿ ಅರಚುಕ್ಕೆ ಶುರುಮಾಡಿದಳು. ಕಿವುಡು ಬೇರೆ ಅವಳಿಗೆ. ಅವಳಿಗೆ ಬಾಗಿಲು ತೆಗೆದು, ಕೆಲಸ ಹೇಳಿ ಮುಗಿಸೋ ಹೊತ್ತಿಗೆ ಅತ್ತೆಮ್ಮನವರ ಗಂಟಲು ಗಾರಾಗಿ ಹೋಗಿಬಿಡುತ್ತಿತ್ತು. ಅದೇ ಕಾರಣವಾಗಿ ಕಡೇಗೆ ನೋಡಿ, ಹೋಗಿಯೇ ಬಿಟ್ಟರು!! ಅದೇ ನೆಪ ಮಾಡಿಕೊಂಡು ಮನೆ ಕೆಲಸದೋಳೂ ನಿಂತು ಹೋದಳು!" ಎಂದು.

ಬೇಗ ಮನೆಗೆ ಹೋಗಿ ಸೇರಿಕೊಳ್ಳೋಣ. ಕಾಮಾಕ್ಷಿ ಹೇಳಿದ ಹಾಗೆ ತಿರುಗಿ ಕೆಲಸದೋಳು ಸಿಗೋತನಕ ಸಮಾಜದ ಚಟುವಟಿಕೇನ ಬಂದ್ ಮಾಡೋಣ ಅಂತ ಜೀಝಾಬಾಯಿ ಹೇಳಿದ್ದನ್ನ ಎಲ್ಲರೂ ಒಪ್ಪಿ ಹೊರಬಿದ್ದರಂತೆ.

—ಎಸ್. ನಾಗರತ್ನ



" ಅಂತೂ ಈಗ್ಲಾದ್ರೂ ನಮ್ಗೆ ಸ್ವಲ್ಪ ವಿರಾಮ ಕೊಟ್ರಲ್ಲಾ......"

ವಿವಾಹ ವೈಭವ

ನನ್ನ ಸ್ನೇಹಿತ ಹಾಗೂ ಕೇಂದ್ರ ಸರ್ಕಾರದ ಇಂಟಲಿಜೆನ್ಸ್ ಆಫೀಸರ್ ಚಂದ್ರೂ ಮದುವೆ ನಿಶ್ಚಯ ಆಗಿದೆ ಅಂತ ಗಾಳಿ ಸುದ್ದಿ ಬರುವುದಕ್ಕೂ, ದೆಹಲಿಯ ನನ್ನ ಹೆಡ್ಡ ಆಫೀಸಿನವರು, "ಹ್ಯಾರಿ, ನಾವು ಕಲ್ಕತ್ತಾದಲ್ಲಿ ಕಳೆದ ವರ್ಷ ಮಾರಿದ ಇಡ್ಲಿ ಹಿಟ್ಟು ರುಬ್ಬೋ ಯಂತ್ರಗಳೆಲ್ಲ ಕುಲಗೆಟ್ಟು ಕೂತಿವೆಯಂತೆ. ಈ ಪತ್ರ ತಲುಪಿದ ತಕ್ಷಣ ಅಲ್ಲಿಗೆ ಹೋಗಿ ಅವನ್ನು ರಿಪೇರಿಮಾಡಿ, ನಮ್ಮ ಕಂಪೆನಿಮಾನ, ನಿನ್ನ ಅನ್ನ-ಎರಡೂ ಉಳಿಸ್ಕೊ" ಅಂತ ತಿಳಿಸುವುದಕ್ಕೂ ಸರಿಹೋಯಿತು. ಮದುವೆ ಯಾವಾಗ? ಎಲ್ಲಿ? ಕನ್ಯೆ ಯಾರು? ಅಂತ ತಿಳಿಯಲು ಪಟ್ಟ ಪ್ರಯತ್ನಗಳೆಲ್ಲ ವಿಫಲವಾದವು. ಬಲು ಗುಟ್ಟಿನ ಮನುಷ್ಯ, ಚಂದ್ರೂ. ಸಂಸಾರಾನ, 'ಕಲ್ಕತ್ತಾದಲ್ಲಿ ಅಣ್ಣಾನ ಮನೆಯಲ್ಲಿ ಒಂದು ತಿಂಗಳು ಇದ್ದು ಬರಲಿ' ಅಂತ ಕಳುಹಿಸಿಕೊಟ್ಟು ಇನ್ನೂ ಹದಿನೈದು ದಿವಸಗಳಾಗಿರಲಿಲ್ಲ ಆಗಲೇ ಮನೆವಾತಾವರಣ 'ಬಿಕೋ' ಅಂತಿದ್ದುದರಿಂದ ಸದ್ಯದ ಪ್ರವಾಸ ಒಂದು ರೀತೀಲಿ ಅನುಕೂಲವೇ ಆಯಿತು ಅಂತ ಅನ್ನಿಸಿದರೂ 'ಆಪ್ತಸ್ನೇಹಿತನ ಮದುವೆಗೆ ಇರುವುದಕ್ಕಾಗಲ್ವಲ್ಲ' ಅಂತ ದುಃಖವೂ ಆಯಿತು.

ಕಲ್ಕತ್ತಾಗೆ ಹೋದಕೂಡಲೆ ಚಂದ್ರೂ ಲಗ್ನ ಪತ್ರಿಕೆ ಮತ್ತು ಪತ್ರ ತಲುಪಿದವು. ಪತ್ರದಲ್ಲಿ: "ಹ್ಯಾರಿ, ನೀನು ಕಲ್ಕತ್ತಾದಲ್ಲಿ ಹೋಗೋಕ್ಮುಂಚೆ ಭೇಟಿ ಮಾಡುಕ್ಕಾಗಲಿಲ್ಲ, ಕ್ಷಮಿಸು. ನನ್ನ ವಿವಾಹಕ್ಕೆ ಇನ್ನೂ ಒಂದುವಾರವಿದೆ; ಅಷ್ಟರೊಳಗೆ ಅಲ್ಲಿಯ ಕೆಲಸ ಮುಗಿಸಿಕೊಂಡು ಖಂಡಿತ ಮದುವೆಗೆ ಬರುವುದು ಅಂತ ಗೀಚಿದ್ದ. 'ಅವನು ಮೊದಲೇ ಸುದ್ದಿ ತಿಳಿಸಿದ್ದರೆ ಎಂ. ಸಿ. ಹಾಕಿ, ಮದುವೆ ನೋಡ್ಕೊಂಡೆ ಇಲ್ಲಿಗೆ ಬರಬಹುದಾಗಿತ್ತಲ್ಲ ಅಂತ ಪೇಚಾಡಿದೆ. ಮದುವೆಗೆ ಹಿಂದಿನ ದಿವಸ ಬಿಡುವು ಮಾಡ್ಕೊಂಡು, ಪಾರ್ಕರ್ ಪೆನ್ ಫ್ಯಾಕ್ಟರಿ ಸೇಲ್ಸ್ ಆಫೀಸರ್ ಡೆಲ್ವೀನ ಹಿಡಿದು, ರಿಯಾಯಿತಿ ದರದಲ್ಲಿ ಅಂದವಾದ ಒಂದು ಪೆನ್ ಸೆಟ್ ಕೊಂಡು, ಚೆಂದವಾಗಿ ಪ್ಯಾಕ್ ಮಾಡಿಸಿ ಅವನಿಗೆ ರವಾನಿಸಿ ಶುಭಾಶಯದ ತಾರು ಕುಟ್ಟಿಸಿದೆ. ಅಂದು ಗುರುವಾರ ಸಂಜೆಯೇ ಇನ್ನೊಬ್ಬ ಮಿತ್ರ ಮೂರ್ತಿಗೆ "ಚಂದ್ರೂ ಮದುವೆ ಮಾಗಡೀಲಿ ವೈಭವವಾಗಿ ನಡೀತಾ? ನಮ್ಮ 'ಗ್ಯಾಂಗ್' ಪೈಕಿ ಯಾರ್ಯಾರು ಹೋಗಿದ್ದ್ರಿ? ಚಂದ್ರೂ ಸೆಲೆಕ್ಷನ್ ಹೇಗಿದೆ....ಎಲ್ಲಾದಕ್ಕೂ ತಪಶೀಲಾಗಿ ಪತ್ರ

ಬರಿಯಯ್ಯ ; ಇಲ್ಲಿ ನನ್ನ ಮನಸ್ಸಿಗೆ ಬೇಜಾರಾಗಿ ಹೋಗಿದೆ. ನಿನ್ನ ಉತ್ತರವನ್ನೆ ನಿರೀಕ್ಷಿಸುತ್ತಿದ್ದೀನಿ" ಅಂತ ಬರೆದು ಹಾಕಿದೆ.

ಮುಂದಿನ ಗುರುವಾರ; ಮುಂಜಾನೆ ಎದ್ದು ಚೋರಿಬಜಾರ್ ಸೌತ್ ಇಂಡಿಯ ಭವನದಲ್ಲಿ ಕೆಲಸಕ್ಕೆ ಹೋದಾಗ "ಅಲ್ಲಾ ಸಾರ್! ನಿಮ್ಮ ಯಂತ್ರ ಅಕ್ಕಿ ಬೇಳೆಗೆ ಬೆರೆತಿರೋ ಕಲ್ಲನ್ನೆಲ್ಲ ಪುಡಿಮಾಡದೆ ಹಾಗೆ ಬಿಟ್ಟು ಬಿಡುತ್ತೆ. ಅಷ್ಟೊಂದು ದುಡ್ಡು ಸುರಿದಿದ್ದಕ್ಕೆ ನನಗೆ ಏನು ಫಾಯಿದೆ? ಯಂತ್ರ ಸರಿಮಾಡಿಕೊಡಿ ಇಲ್ಲ ದುಡ್ಡು ವಾಪಸ್ ಮಾಡಿ" ಅಂತ ಗೋಣಗಿದ ಮಾಲೀಕ. ಪರಾಶರ ನೇರ್‌ಜಿಯ ಹತ್ತಿರ ಸಂಜೆಯವರೆಗೆ ಹೆಣಗಿ, ನಂತರ ಮನೆಗೆ ಹೋದಾಗ ದಣಿದು ಬೇಜಾರಾಗಿದ್ದ ಜೀವಕ್ಕೆ ಬಲುಸಂತೋಷವಾಯಿತು, ಕೈಹಿಡಿದವಳು ನಿಂಬೆಹಣ್ಣಿನ ಪಾನಕದ ಲೋಟದ ಜೊತೆಗೆ ತಂದು ಕೊಟ್ಟ ಎರಡು ಪತ್ರಗಳಲ್ಲಿ ಮೂರ್ತಿ ಮತ್ತು ಚಂದ್ರೂ ಇಬ್ಬರ ಬ್ರಹ್ಮಲಿಪಿ ಕಂಡುಬಂದಾಗ. ಲಕೋಟೆಗಳನ್ನು ಅವಳ ಕೈಗೇ ಕೊಟ್ಟು, "ಒಡೆದು ಓದ್ಕೊ ನಿಮ್ಮ ಸ್ನೇಹಿತರ ಮದುವೆ ಹೇಗೆ ನಡೀತಂತೆ? ಅಂತ ಕೇಳಿ, ಕೇಳಿ, ಗೋಳು ಹುಯ್ಕೊಂತಿದ್ದೆಯಲ್ಲ" ಅಂತ ಹೇಳಿದೆ. ಅವಳಿಗೆ ತಿಳಿಸ ಬಾರದಂಥ ವಿಷಯವೇನಿರತ್ತೆ ಮಹಾ! ಅಂತ ಮನಸ್ಸಿನಲ್ಲಿಯೆ ಅಂದುಕೊಂಡು ಪಾನಕ ಸವಿಯುತ್ತ ಆರಾಮ ಕುರ್ಚಿಯ ಮೇಲೆ ಕುಳಿತೆ. ಅವಳು ಕವರನ್ನು ಒಡೆದು ಓದಿದಳು, ಮೂರ್ತಿ ಒಂದೇ ಪುಟದಲ್ಲಿ ಬರೆದಿದ್ದುದನ್ನು:

"ಹ್ಯಾರಿ, ಯಾರಾದ್ರೂ ಬರೆದ ಪತ್ರಕ್ಕೆ ನಾನು ಉತ್ತರ ಕೊಡ್ತಾ ಇರೋದು ಇದೇ ಮೊದಲನೆ ಸಾರ್ತಿ ಅಂತ ಮರೆಯಬೇಡ. ನೀನಂತು ನಮಗೆಲ್ಲ ತಿಳಿಸದೆ ಹೊರಟುಬಿಟ್ಟೆಯಲ್ಲ, ಕಲ್ಕತ್ತಾಗೆ, ನೀನು ನನ್ನ ಲಕ್ಕಿಹ್ಯಾಂಡ್ ಕಣಯ್ಯ ನೀನು ಶಫಲ್‌ಮಾಡಿ ಎಲೆ ಹಂಚಿದಾಗ ಯಾವಾಗಲಾದರೂ ಆಟ ಹೇಳಿ ನಾನು ಸೋತಿದ್ದೀನಾ, ಹೇಳು? ಚಂದ್ರೂ ಮದ್ವೆಗೆ ಹೋಗಿದ್ದೆಯಾ? ಅಂತ ಕೇಳಿದ್ದೆ ನೀನು. ಈಗ ಅನ್ನಿಸ್ತಾ ಇದೆ, ಮಾಗಡೀಗೆ ಹೋಗಬಾರದಾಗಿತ್ತೂಂತ. ಅಲ್ವೊ! ಒಂದು, ರಾತ್ರೀಲಿ ಹದಿನೆಂಟು ರೂಪಾಯಿ ಸೋತರೆ, ಯಾರಿಗೆತಾನೆ ಬೇಜಾರಾಗಲ್ಲ ಹೇಳು? ಅಷ್ಟೊಂದು ನಷ್ಟವಾಗುತ್ತಿರಲಿಲ್ಲ. ನಾನು ಮೂರನೆಯ 'ಬೇಸ್ತ್'ನಲ್ಲಿ ಆಟ ಹೇಳಿದಾಗ ಹಾಳು ಶೀನನ ಹತ್ತಿರ ನನ್ನ 'ಟ್ರಂಪ್ಸ್' ಸೇರ್ಕೊಳ್ಳದೆ ಇದ್ದಿದ್ದರೆ. ಸುಬ್ಬಣ್ಣ ಪದ್ದೂ—ಇಬ್ಬರೂ ಸೂರೆ ಹೊಡಿದ್ಬಿಟ್ರು ತಲಾ ಎರಡು ಸಾರ್ತಿ ಮೂರನೆಯ 'ಬೇಸ್ತ್'ಗೆದ್ದು ಮದ್ವೆ ಗಲಾಟೆಯಲ್ಲಿ ಇದ್ದ ಒಂದು ಜೊತೆ ಚಪ್ಪಲಿಯೂ ಹೋಯಿತು. ಈಗತಾನೆ ಬೊಂಡಮರಿ ಉರುಫ್ ವಾಸು ಬಿ.ಎ., ಎಂ. ಡಿ. ಹೆಚ್ (ಜಲಂದರ) ಸಿಕ್ಕಿದ್ದ. ಅವನ ಮನೆಯ ರಸ್ತೆಯಲ್ಲಿ ಸರ್ಕಾರದವರು ಫೇರ್ ಪ್ರೈಸ್ ಡಿಪೋ ತೆಗೆದಂದಿನಿಂದ ದಿನದ ಕಾಪಿ ತಿಂಡಿ ಖರ್ಚು ಹುಟ್ಟಿಸಿ

ಕೊಳ್ಳುತ್ತಿದ್ದಾನಂತೆ, ಹೋಮಿಯೋಪಥಿಯಿಂದ ಹೆಚ್ಚು ಬಿಡುವಿಲ್ಲ ನನಗೆ. ಪುರುಸೊತ್ತಾದಾಗ ವಿವರವಾಗಿ ಬರೀತೀನಿ ನೀನು ಮಾತ್ರ ಆಗಾಗ್ಗೆ ಬರೀತಿರು.”

ಶುದ್ಧ ಬೇಜವಾಬ್ದಾರಿ ಮನುಷ್ಯ; ಜಾಕಿ ಆಟದ ಹುಚ್ಚು ಹಿಡಿದಿರುವುದರಿಂದಲೆ ಫೈನಲ್ ಬಿ.ಇ. ತಲುಪಲು ಎಂಟು ವರ್ಷ ಬೇಕಾಯಿತು, ಇವಳ ಎದುರಿಗೆ ನನ್ನ ಮಾನಕಳೆದನಲ್ಲ ಅಂತ ಮನಸ್ಸಿನಲ್ಲಿಯೇ ಶಾಪ ಹಾಕುತ್ತಿದ್ದ ಹಂಗೆಯೇ ಅವಳು ಇನ್ನೊಂದು ಪತ್ರವನ್ನು ಬಿಚ್ಚಿ “ನಮ್ಮ ವಿವಾಹ ಮಹೋತ್ಸವದಲ್ಲಿ ಉಡುಗೊರೆ ಮತ್ತು ಸುಭಾಶಯಗಳನ್ನಿತ್ತ ತಮಗೆ ವಂದನೆಗಳು – ಶ್ರೀಮತಿ ಮತ್ತು ಶ್ರೀ ಚಂದ್ರೂ” ಎಂದು ಓದಿ ನಗುತ್ತಿದ್ದಂತೆಯೇ, ಪೋಸ್ಟ್‌ಮ್ಯಾನ್ ಅವಳ ಹೆಸರನ್ನು ಕೂಗಿ ಲಕೋಟೆಯೊಂದನ್ನು ಒಳಗೆಸೆದು ಹೋದ. ಅವಳು ಅದನ್ನು ಬಿಡಿಸಿ, “ನಮ್ಮ ಸೋದರತ್ತೆ ಮಗಳದು ಪತ್ರ! ನಿಮ್ಮ ಸ್ನೇಹಿತರ ಹೆಂಡತಿ, ಅವಳ ಕ್ಲಾಸ್‌ಮೇಟ್. ಮಾಗಡೀಗೆ ಮದುವೆಗೆ ಹೋಗಿದ್ದಳಂತೆ ಅಲ್ಲಿಯ ವಿಚಾರ ವಿವರವಾಗಿ ಬರೆದಿದ್ದಾಳೆ—ನಿಮ್ಮ ಸ್ನೇಹಿತರಂತೂ ಬರೀಲಿಲ್ಲ. ಓದ್ತೀನಿ ಕೇಳಿಂದ್ರಿ” ಅಂದಕೂಡಲೆ ನಿದ್ರೆ ಬಂದವನ ಹಾಗೆ ಕಣ್ಣು ಮುಚ್ಚಿ ಪಕ್ಕಕ್ಕೆ ಹೊರಳಿದೆ.

—ಹ್ಯಾರಿ



“ಸಾರಿ ಸಾರ್ ಎಲ್ಲೋ ನೋಡ್ತಿದ್ದೆ..” “ಆದರು ಚೈನಾದವ್ರು ಒಳಗೆ ನುಗ್‌ತಿದ್ರು. ನಮ್ಮವರು ಶಾಂತಿ, ಶಾಂತಿ ಅಂತ ಸುಮ್ನಿರೋದು ತಪ್ಪು ಸಾರ್, ನುಗ್‌ಬೇಕು”

ಏನಂತ ತಲೇ ಮಂಗ್ಯಾ

(ಚಿತ್ರ ಸಮೀಕ್ಷೆ)

ಸೂರ್ಯದೇವನಿನ್ನೂ ಮಧ್ಯಾಹ್ನಗತವಾಗಿಲ್ಲ. ಹೊಂಬಿಸಿಲು, ಎಳೆ ಹುಲ್ಲಿನ ಮೇಲೆ ಹಾಸಿದೆ. ತರುಲತೆಗಳು ಹಚ್ಚ ಹಸುರಾಗಿ ಆಗಸವನ್ನು ಮುತ್ತಿಡುತ್ತಿವೆ. ಋಷ್ಯಾಶ್ರಮದ ಸನ್ನಿವೇಶ ಅಥವಾ ಉದ್ಯಾನವನವೆಂದೇ ತಿಳಿಯಬಹುದು. ಆದರೆ ಹಿಂದೆ ನಾಲ್ಕೆಂಟು ಸ್ಯಾಕ್ಸೊಫೋನುಗಳು, ಡ್ರಂಗಳು, ಬ್ಯಾಂಡುಗಳು ಸಂಗೀತ ಹಬ್ಬಿಸಿವೆ. ಅವಳು ಹದಿನೆಂಟರ ಹರೆಯದ ಮುಗ್ಧೆ. ಎಸಳಾದ ದೇಹರುಚಿ, ಸುಂದರ ದೇಹಸೌಷ್ಠವ. ಪ್ರೇಮಕ್ಕೆಂದೇ ಅನಂಗ ಅವಳನ್ನು ಹುಟ್ಟಿಸಿರಬೇಕು! ಜಾರುವ ನೈಲಾನ್ ಸೀರೆ, ಅದರದೇ ಚಪ್ಪಲಿ, ಅದರದೇ ರಟ್ಟಿನ ಪುಸ್ತಕಗಳನ್ನು ಹಿಡಿದು, ಜಿಂಕೆಗಣ್ಣುಗಳಿಂದ ನಡೆಯುತ್ತಿದ್ದಾಳೆ. ಒಂದು ಹೆಕ್ಟೋಮಿಟರ್ ನಡೆದಳು. ಎರಡು....ಮೂರು....ಇನ್ನೇನು ಅರ್ಧ ಕಿಲೋಮೀಟರ್ ಆಗಲಿದೆ. ಅವನು ಆಗ ಹಿಂದಿನಿಂದ ಸರಸರನೆ ಬಂದ. ಭಂಡತನದಿಂದ ಸಿಳ್ಳೆ ಹೊಡೆದ, ಚಪ್ಪಾಳೆ ತಟ್ಟಿದ, ಕುಣಿದ, ಹೆಂಗಸರನ್ನು ಚುಡಾಹಿಸಲೆಂದೇ ಅವನು ಹುಟ್ಟಿರಬೇಕು! ಬಂದು ಆ ನೀಲನಯನೆಯ ಹತ್ತಿರ ನಿಂತು ಕ್ಯಾಕರಿಸಿ 'ಸ್ವಲ್ಪ ಮಾತಾಡಿಸಬಾರದೇ ನನ್ನ' ಎಂದ. ಅವಳು ರೇಗಿದಳು. ಕೂಗಿದಳು:

'ಏನಂತ ತಲೇ, ಮಂಗ್ಯಾ' ಎಂದಳು. ಅವಳ ಉಚ್ಚಾರಕ್ಕೆ ಹೊಂದಿಕೊಂಡು ಈ ಅಕ್ಷರಗಳು ರಜತ ಪರದೆಯ ಮೇಲೆ ನಿಮಗೆ ಕಾಣಿಸುತ್ತವೆ. ಇದು ಜಾಲಿಕಾವಲು ಸ್ಟುಡಿಯೋ ಚಿತ್ರ. ನಾಯಕ—(ರೆಬೆಲ್) ರತ್ನಾಕರ ನಾಯಕಿ-(Sensational new find) ಬುದ್ಬುದಾ! (She will delight you in 'ಬೀಡಿ ಕಹಾಂ, ಕಾಡಿ ಕಹಾಂ?')

'ಬೀಡಿ ಕಹಾಂ, ಕಾಡಿ ಕಹಾ!' ಈ ಚಿತ್ರಕ್ಕೆ ಹೆಸರಿಡುವುದಕ್ಕೇ ಈಗಾಗಲೇ ಇಪ್ಪತ್ತೊಂಬತ್ತು ವರ್ಷಗಳಾಗಿವೆ. ಇದನ್ನು ಮುಗಿಸಲು ಇನ್ನೆಷ್ಟು ವರ್ಷ ಬೇಕೋ ಲೆಕ್ಕ ಹಾಕಿ! ಅದೊಂದು ವಿಷಾದಾಂತ ಚಿತ್ರವಾದುದರಿಂದ ನಾಯಕ ನಾಯಕಿಯರು ಮರಣವನ್ನು ಸಹಜವಾಗಿ ಅಪ್ಪುವವರೆಗೂ ತಡೆಯಬೇಕೆಂದು ಅಂದಾಜು ಮಾಡಲಾಗಿದೆ. ಈ ನಡುವೆ ಅದಕ್ಕಾಗಿ ವೆಚ್ಚವಾಗಲಿರುವ ಅಪಾರವಾದ ಹಣವನ್ನು ಗಳಿಸ

ಲೆಂದೇ ಈಗ ‘ ಏನಂತತಲೇ ಮಂಗ್ಯಾ ’ ತಯಾರಿಸಲಾಗಿದೆ. ಅದು ನಿರೀಕ್ಷೆಗೆ ಮೀರಿ ಹಣಗಳಿಸುವುದು ಖಂಡಿತ.

ರತ್ನಾಕರ ‘ ರೆಬೆಲ್ ’ ಎನ್ನಿಸಿಕೊಂಡುದು ಹೇಗೆ? ಯಾವುದರ ವಿರುದ್ಧ ಬಂಡೆದ್ದಿದ್ದಾನೆ ಅವನು ? ಈ ಪ್ರಶ್ನೆಗೆ ಉತ್ತರ ಕೊಡುವುದರಲ್ಲೇ ಚಿತ್ರದ ಯಶಸ್ಸಿನ ರಹಸ್ಯ ಅಡಗಿದೆ.

ರತ್ನಾಕರ, ಅಭಿನಯ ಕಲೆಯ ವಿರುದ್ಧ ಬಂಡೆದ್ದಿದ್ದಾನೆ. ಕಲೆಯ ಗೌರವ, ಮಾನ, ಮಾಪಕಗಳ ವಿರುದ್ಧವೆ ಅವನ ದಂಗೆ ಸ್ವಚ್ಛಂದತೆ, ಅಶ್ಲೀಲತೆ ಅಸಂಭಾವ್ಯತೆ ಗಳೇ ಅಲ್ಲವೆ ದುಡ್ಡಿನ ಗಿಡಕ್ಕೆ ಹಾಕುವ ಗೊಬ್ಬರ?

ಮುಂದಿನ ದೃಶ್ಯವನ್ನೇ ಗಮನಿಸಿ, ನಾಯಕಿ ಬಸ್ಸಿನಲ್ಲಿ ಕುಳಿತಿದ್ದಾಳೆ ನಾಯಕ ಜೇಬಿನಿಂದ ಬ್ಯಾಂಡೊಂದನ್ನು ತೆಗೆದು ಊದಲಾರಂಭಿಸುತ್ತಾನೆ. ಕಂಡಕ್ಟರು ಬೂಟುಗಾಲಿನಿಂದ ತಾಳ ಹಾಕುತ್ತಾನೆ. ಡ್ರೈವರ್ ವ್ಹಾ ವ್ಹಾ ಎಂದು ಕೂಗುತ್ತಿದ್ದಾನೆ. ನಾಯಕನ ಮಿತ್ರನೊಬ್ಬ ಬ್ಯಾಂಡ್ ಕಿತ್ತುಕೊಂಡು ಊದ ಲಾರಂಭಿಸುತ್ತಾನೆ. ನಾಯಕಿ ಲೊಟಗೆ ಹೊಡೆಯುತ್ತಿದ್ದವಳು, ನಾಯಕನ ಮೂತಿ ಯನ್ನು ನೋಡುತ್ತಾಳೆ. ನಾಯಕ ಅವಳ ಬಳಿ ಹೋಗಿ ತನ್ನ ಮೆಥೆಡ್ ನಂ-2ವನ್ನು ಉಪಯೋಗಿಸುತ್ತಾನೆ.

“ ಹಲೋ ಸ್ಪ್ಲೆಂಡಿಡ್. ನೀನು ಹ್ಯಾಗಿದ್ದೀ ಗೊತ್ತೇ. ನಿನ್ನೋಡಿದರೆ ನಂಗೆ ಹೆಂಗ್ಹೆಂಗೋ ಆಗ್ತದೆ”

ನಾಯಕಿ “ ಏಳೋ ಸೊಟ್ಮುಸ್ಡಿ, ಕಕವಾ ! ” ಎನ್ನುತ್ತಾಳೆ. ಹೀಗೆ ಕೀಚಕ (ನಂ-1) ಯಾಂಕಿ (ನಂ-2) ಮೆಥೆಡ್ಡುಗಳನ್ನು ಉಪಯೋಗಿಸಿ ವಿಫಲನಾದ ನಾಯಕ ಪುರಾತನ ಭಾರತದ ಒಂದು ಮೆಥೆಡ್ ಉಪಯೋಗಿಸುತ್ತಾನೆ. ಅದೇ ಶಂತನು ಮೆಥೆಡ್. ಶಂತನು ಬೇಟೆಗೆ ಹೋಗಿ ಯೋಜನಗಂಧಿಯನ್ನು ನೋಡಿದನಲ್ಲ ಅವನು ಏನು ಮಾಡಿದ? ಕೀಚಕನ ಹಾಗೆ ‘ ನುಡಿಸಲಾಗದೆ ತರಳೆ ’ ಎನ್ನಲಿಲ್ಲ. ವಿಂಡಿನಿಕೋಲ್ಸನ ಹಾಗೆ ‘ Listen Cutie,’ ಎನ್ನಲಿಲ್ಲ. ‘ ನೀ ಬಾ ಪೋಪಂ ’ (ಪಂಪ) ಅಥವಾ ‘ ಅರಮನೆಗೆ ನಡೆ ’ (ಕುಮಾರ ವ್ಯಾಸ) ಎಂದ. ಅದನ್ನೇ ರತ್ನಾಕರ, ಬುದ್ಬುದಾಳಿಗೆ ಹೇಳಿದ್ದು ಬಸ್ಸಿನಲ್ಲಿ ‘ ಬಾ, ಹೋಗನ ’ ಸರಿ ಇಬ್ಬರೂ ಲಬೋ ಲಬೋ ಹೊಡೆದುಕೊಳ್ಳಲಾರಂಭಿಸುತ್ತಾರೆ. ಆ ಸಂಗೀತವನ್ನೇ ನೀವು ಪ್ರತಿದಿನ ರೇಡಿಯೋವಿನಲ್ಲಿ ಕೇಳುವುದು.

ಪ್ರೇಮದ ನವಗಾತ್ರ, ಈ ಚಿತ್ರದಲ್ಲಿ ಸ್ಫುರಿಸಿದೆ. ಬೀದಿಯಲ್ಲಿ ಏಕೆ ಈ ಪ್ರೇಮಾಲಾಪ? ಎಂದೀರಿ ನೀವು. ಹಾಗೆ ನಿಮ್ಮಂತೆಯೇ ಮಡಿವಂತರಾದೆ

ವೆನ್ನೋಣ. ಆಗ ಏನು ? ನಾಯಕನನ್ನೂ ನಾಯಕಿಯನ್ನೂ ಕೋಣೆಯಲ್ಲಿ ಕೂಡಿ ಬರೀ ಮುಚ್ಚಿದ ಬಾಗಿಲನ್ನೇ ಒಂದರ್ಧಗಂಟೆ ತೋರಿಸಿದರೆ ಅವರ ಪ್ರೇಮವನ್ನು ಸೂಚಿಸಿದಂತೆ ಆಗುವುದೇ ?

'ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನ ನಲ್ಮೆಗಾಗಿ ನಾನು ಪ್ರಾರ್ಥಿಸುತ್ತೇನೆ' ಎನ್ನುತ್ತಾನೆ ನಾಯಕ.

"ನೀನೇನನ್ನು ಬಯಸುವೆಯೋ, ಏನನ್ನು ಬೇಡವೆಯೋ ನಿನಗೇ ಗೊತ್ತಿಲ್ಲ!" ಎನ್ನುತ್ತಾಳೆ ನಾಯಕಿ.

"ನಾನೇನನ್ನು ಬಯಸುವೆನೆಂದು ನನಗೆ ಗೊತ್ತಿಲ್ಲವೇ !' ಎಂದು ನಾಯಕ ವಿಕಟಾಟ್ಟಹಾಸ ಮಾಡುತ್ತಾನೆ 'ನಾನು ಬಯಸುವುದು ಒಂದನ್ನು. ಅದನ್ನಾಗಲೇ ಹೇಳಿದ್ದೇನೆ' ಎನ್ನುತ್ತಾನೆ ನಗುತ್ತಾನೆ. ಅರ್ಥವಾಯ್ತೇ ?

ಬರಿಯ ನಾಯಕನೊಬ್ಬನೇ ಅಲ್ಲ ಈ ಚಿತ್ರದ ನಿರ್ಮಾಪಕರೂ ನೀವು ದುಡ್ಡುಳಿಸುವುದರ ವಿರುದ್ಧ ಬಂಡೆದ್ದಿದ್ದಾರೆ. ನೀವು ದುಡ್ಡು ಕೊಡದೆ ನಿರ್ವಾಹವೇ ಇಲ್ಲ. ಕತೆಗಾರರೂ, ಸಂಭಾಷಣಾಲೇಖಕರೂ ಬಂಡೆದ್ದಿದ್ದಾರೆ ಸಾಹಿತ್ಯ ವಿರುದ್ಧ. ಸಂಗೀತ ನಿರ್ದೇಶಕರು ಶ್ರಾವ್ಯ ಸುಸ್ವರಗಳ ವಿರುದ್ಧ ಬಂಡೆದಿದ್ದಾರೆ. ಫೋಟೋ ಗ್ರಾಫರೂ ಅಷ್ಟೆ-ಏಕಾಂತ ದೃಶ್ಯಗಳ ಛಾಯಾಗ್ರಹಣ ಮಾಡುವುದಿಲ್ಲವೆಂದು ಬಂಡೆದ್ದಿದ್ದಾರೆ. ಸಂಕಲನಕಾರರೂ ಅಷ್ಟೇ ಚಿತ್ರ ಏಕಮುಖವಾಗಿರುವುದರ ವಿರುದ್ಧ ಬಂಡೆದ್ದಿದ್ದಾರೆ. ಪ್ರೇಮ, ಹಾಸ್ಯ, ಕೊಲೆ ಎಲ್ಲವನ್ನೂ ಒಂದೇ ನಿಮಿಷಕಾಲದಲ್ಲೇ ತೋರಿಸುತ್ತಾರೆ.

ಪಾಶ್ಚಾತ್ಯ ಸಂಪ್ರದಾಯದ ಅನುಕರಣೆ-ಈ ಚಿತ್ರ ಎಂದು ಹೇಳುವುದು ಶುದ್ಧ ತಪ್ಪು. ಈ ಮೊದಲೇ ತಿಳಿಸಿದಂತೆ ಪ್ರೇಮ ಪ್ರತಿಪಾದನೆಯಲ್ಲಿ ಭಾರತೀಯ ವಿಧಾನ (ಶಂತನು ಮತ್ತು ಕೀಚಕ ಮೆಥೆಡ್‌ಗಳು)ಗಳನ್ನೇ ಅನುಸರಿಸಲಾಗಿದೆ. ಪಾಶ್ಚಾತ್ಯ ಚಿತ್ರಗಳಂತೆ ಇಲ್ಲಿ ಯಾವ ನಾಟಕೀಯ ಸನ್ನಿವೇಶಗಳನ್ನ ಪೋಷಿಸಿಲ್ಲ. ಚಿತ್ರ ಕತೆಯಲ್ಲಿ ಯಾವ ಸಂಬದ್ಧತೆಯೂ ಇಲ್ಲ. ಪಾಶ್ಚಾತ್ಯ ಚಿತ್ರಗಳಲ್ಲಿ ಸಂಗೀತ ಇರುವುದಿಲ್ಲ. ಪಾಶ್ಚಾತ್ಯ ಚಿತ್ರಗಳಲ್ಲಿ ಅಭಿನಯ ಇರುತ್ತದೆ ಇಲ್ಲಿ ಇಲ್ಲ.

ಆಚಾರ್ಯ ವಿನೋಬಾಜಿ ತಾವು ದರೋಡೆಕೋರರೆಂದು ಹೇಳಿಕೊಂಡರು. ಈ ಚಿತ್ರ ನಿರ್ಮಾಣದಲ್ಲೂ ನಿಮ್ಮೆಲ್ಲರ ಹಣದ ಸದ್ಬುದ್ಧಿಯ ದರೋಡೆ ನಡೆಯಲಿದೆ. ಇವರೆಲ್ಲಾ ಸರ್ವೋದಯ ಸಮಯ ಸೂರ್ಯರು.

ಇನ್ನು ಈ ಚಿತ್ರದ ಜಾಹಿರಾತಿನಲ್ಲೂ ನವ ವಿಧಾನದ ರೀತಿಯಿದೆ ಇಷ್ಟೊಂದು ಜನಪ್ರಿಯವಾಗಲಿರುವ ಈ ಚಿತ್ರಕ್ಕೆ ಜಾಹಿರಾತು ಅನವಶ್ಯಕ. ಆದುದರಿಂದ ಈ

ಚಿತ್ರವನ್ನೇ ಜಾಹಿರಾತಿಗಾಗಿ ಅಳವಡಿಸಲಾಗಿದೆ. ಈ ಒಂದು ತಂತ್ರವನ್ನು ಗಮನಿಸಿ.

ನಾಯಕಿಯನ್ನು ಬೆನ್ನಟ್ಟಲು ನಾಯಕ ಹೊರಟನಲ್ಲ. ಆಗ ಟೈಂ ನೋಡಿ ಕೊಳ್ಳುತ್ತಾನೆ. ಹತ್ತೂ-ಮೂವತ್ತೈದು ನಿ. ಆರು ಸೆಕೆಂಡಿಗೆ ಸರಿಯಾಗಿ ನಾಯಕಿ ಊರುಬಿಟ್ಟು ಕಾಲೇಜಿನ ದಾರಿ ಹಿಡಿಯುತ್ತಾಳೆ.

ಆಗ ಕ್ಲೋಸ್ ಅಪ್-ಕೈಗಡಿಯಾರದ ಬೃಹತ್ ಚಿತ್ರ ತೆರೆಯ ಮೇಲೆ-ಅದರಿಂದ ರಜತ ಪರದೆಯ ಅಂಚಿಗೆ ಒಂದು ಆ್ಯರೋಮಾರ್ಕ್-ನೆನಪಿಡಿ-ಇದು ' ಗ-ಬಟಲ್ ' ಕೈ ಗಡಿಯಾರ. ಮೊದಲೇ ತಿಳಿಸಿದ ರೀತಿಯಲ್ಲಿ 'ಏನಂತತಲೇ ಮಂಗ್ಯಾ' ಎನ್ನಿಸಿಕೊಂಡನಲ್ಲಾ, ಮನೆಗೆ ಬಂದು ದುಃಖದಿಂದ ಕೈಯನ್ನು ಮೇಜಿಗೆ ಗುದ್ದಿದ. ಮತ್ತೊಂದು ಗಡಿಯಾರದ ಕ್ಲೋಸಪ್-ಆ್ಯರೋಮಾರ್ಕ್-ನೆನಪಿಡಿ ಇದು ಷಾಕ್ ಫ್ರೂಫ್ ' ಗ-ಬಟಲ್ ' ವಾಚ್. ಸರೋವರ ವಿಹಾರಕ್ಕೆ ನಾಯಕ ನಾಯಕಿಯರು ಹೋದರಲ್ಲಾ ಹಗಲೆಲ್ಲಾ-ರಾತ್ರಿಯೆಲ್ಲಾ ಜಲವಿಹಾರ ನಡೆಸಿದರು. ಕೊನೆಗೆ ಸಂತೋಷಭರದಲ್ಲಿ ಗಡಿಯಾರವನ್ನು ನೀರಿಗೆಸೆದ. ಕೊನೆಯಲ್ಲಿ ಖಳನಾಯಕನೇ ಕೊಲೆಗಾರನೆಂದು, ನಾಯಕ ಜೋಡಿಗೂ ತಿಳಿದಮೇಲೆ, ನಾಯಕನೂ, ನಾಯಕಿಯೂ ಬೀದಿಯಲ್ಲಿ ಲಬೋ ಲಬೋ ಸಂಗೀತಕ್ಕೆ ಸರಿಯಾಗಿ ನರ್ತನ ಮಾಡುತ್ತಿರುವಾಗ ಸರೋವರದ ಬೆಸ್ತ ಆ ಗಡಿಯಾರ ತಂದುಕೊಡುತ್ತಾನೆ. ಅದಿನ್ನೂ ನಡೆಯುತ್ತಿದೆ ಸರಿಯಾಗಿ ಸಮಯ ತೋರಿಸುತ್ತಿದೆ.

ಆ್ಯರೋಮಾರ್ಕ್-ಪರದೆಯ ತುದಿಯಂಚಿನ ಆವರಣದಲ್ಲಿ ' ನೆನಪಿಡಿ ಗ-ಬಟಲ್ ವಾಚ್ ವಾಟರ್‌ಪ್ರೂಫ್ ಮತ್ತು ಆಟೋಮ್ಯಾಟಿಕಲಿ ವೌಂಡ್ ' ಜಗತ್ತಿಗೆ ಭಾರತ ಸೊನ್ನೆ ಮತ್ತು ಗಾಲಿಗಳನ್ನು ಹಿಂದೆ ನೀಡಿತ್ತು. ಇಂದು ಆ್ಯರೊಮಾರ್ಕ್ ಮತ್ತು ಆವರಣಗಳನ್ನು ನೀಡಿದೆ.

ವಿಶೇಷ ವರ್ತಮಾನ

ಇದೋ ರೆಬೆಲ್ ರತ್ನಾಕರ ನಿಮಗೆ ಬರೆದ ಕಾಗದವನ್ನು ಇನ್ನೊಮ್ಮೆ ಪರಿಶೀಲಿಸಿ.

ಮಿತ್ರರೇ,

ನಾನು ರತ್ನಾಕರ. ನನ್ನ ಪ್ರಥಮ ಚಿತ್ರ ' ಬೀಡಿ ಕಹಾಂ ಕಾಡಿ ಕಹಾಂ! ' ಇನ್ನೂ ನಿಮ್ಮೆದುರು ಬಂದಿಲ್ಲ. ಈಗಾಗಲೇ ನಾನು ನಿಮ್ಮ ಮೆಚ್ಚುಗೆಯ ನಟನಾಗಿ

ದ್ದೇನೆ. 'ಏನಂತತಲೇ ಮಂಗ್ಯಾ!' ನೋಡದ ನಿಮ್ಮ ಮಿತ್ರರಿಗೆ ಅದೇ ಪ್ರಶ್ನೆಯನ್ನೇ ನೀವು ಕೇಳಿ.

ಕುಪ್ರಸಿದ್ಧ 'ತಾರಾಪದ್ಧತಿ'ಗೆ ನನ್ನನ್ನು ಕೊಡಲಿಯೇಟು ಎಂದು ವರ್ಣಿಸಿದ್ದರೂ ಸಹಾ, ನಾನು ಇದೀಗ ದೊರೆತ ಯಶದಿಂದ ತೃಪ್ತನಾಗಿಲ್ಲ. ಇಂದೇ 'ಏನಂತತಲೇ ಮಂಗ್ಯಾ!' ನೋಡಿ ನನ್ನ ಅಭಿನಯವನ್ನು ನಿರೀಕ್ಷಿಸಿ. ನನಗೆ ಸೂಕ್ತ ಸಲಹೆ ನೀಡಿ. ಅತ್ಯುತ್ತಮ ಸಲಹೆಗೆ ಹತ್ತು ರೂ. ಬಹುಮಾನ ವುಂಟು.

ಇಂತು,

ರತ್ನಾಕರ.

ಹಿಂದಿನಿಂದ: ನನ್ನ ಸುದ್ದಿ ಇರಲಿ, 'ಏನಂತತಲೇ ಮಂಗ್ಯಾ'ದ ನಾಯಕಿ ಬುದ್ಬುದಾಳನ್ನು ನೋಡಿ. ನೀವು ಒದೆ ತಿಂದ ನಾಯಿಯಂತೆ ಚೀರಿ, ಸಂತೋಷಾತಿರೇಕದಿಂದ ನೆಲಕ್ಕೆ ಬಿದ್ದು ಕಾಲು ಬಡಿಯದಿದ್ದರೆ ಅದಕ್ಕೊಂದು ಐದು ರೂ. ಬಹುಮಾನ.

ಇಂತು,

ರತ್ನಾಕರ.

ಈ ಕಾಗದದ ಫಲ ಶೃತಿಯನ್ನು ತಿಳಿಯುವ ಉದ್ದೇಶದಿಂದಲೇ ನಾನು ಜಾಲಿಕಾವಲು ಸುಡಿಯೋಗೆ ಹೋಗಿದ್ದೆ. ಆಗ ಸಂಜೆ ಆರುಗಂಟೆಯ ಸಮಯ. ನಾನು ನಿರ್ಮಾಪಕರ ಕೊಟಡಿಗೆ ಹೋದಾಗ ದಂತ ಬಾಧೆಯಿಂದ ನರಳುವ ಹರಳೆಣ್ಣೆಯೊಬ್ಬ ಒಳಗಿನಿಂದ ಓಡಿಹೋದ. ಒಳಗಿನಿಂದ "ನಿನಗೆ ಒಂದು ಚಿತ್ರಕ್ಕೆ ಐವತ್ತು ಸಾವಿರ ಕೊಡುವುದೇ? ಏಳೋ ಮಂಗ್ಯಾ, ಮೂರುನೂರಕ್ಕೆ ಮೇಲೆ ಒಂದು ಬಿಲ್ಲೆ ಸಿಗಲ್ಲ. ಅದ್ಯಾವನು ನಿನಗೆ ಕೊಡುತ್ತಾನೋ ನೋಡ್ತಿನಿ!" ಎಂದು ಚೀರುತ್ತಿದ್ದರು ಗುಂಡಣ್ಣನವರು. ಓಡಿಹೋದ ಆ ಕಕವನೇ ರತ್ನಾಕರ. ಗುಂಡಣ್ಣನವರನ್ನು ಪ್ರಶ್ನಿಸಿದೆ. 'ಸಲಹಾಸ್ಪರ್ಧೆಯ ಫಲಿತಾಂಶವೇನಾಯಿತು?' "Oh come on ನಿಮಗೇ ಸಿಕ್ಕಿದೆ" ಎಂದರು. 'ಇವನಿಗೆ ಸಾವಿರವಂತೆ ಸಾವಿರವಂತೆ' ಎಂದು ಗೊಣಗಿಕೊಂಡರು. ನನ್ನ ಸಲಹಾಪತ್ರವನ್ನು ತೋರಿಸಿದರು. ಅದರಲ್ಲಿ ನಾನು ಬರೆದಿದ್ದುದು ಇಷ್ಟೇ:

ಮಿತ್ರ ರತ್ನಾಕರ,

ಅಭಿನಯಿಸುವುದನ್ನು ಬಿಟ್ಟುಬಿಡು

ಇಂತು,

—ಅ. ರಾ. ಸೇ.

ಏಲೂರಿನಲ್ಲಿ ಒಬ್ಬ
ಉಸ್ತಾದ ನಿದ್ದನು.
ಕುಸ್ತಿ ಮಾಡಿ ಮಾಡಿ ಅವನು
ಸುಸ್ತೆ ಆದನು.
ಮನೆಯ ತಮ್ಮನೊಮ್ಮೆ
ಮೊನೆಯ ಮಾತನಾಡೆ.
ಎಲ್ಲ ಬಿಟ್ಟು ದೆಲ್ಲಿಗೆಂದು
ನಡೆದೆ ಬಿಟ್ಟನು.
ಎಲ್ಲವನ್ನು ಉಳಿಸಿಕೊಂಡು
ಬಂದೆಬಿಟ್ಟನು.

* * *

ಮುಂಬಯ್ಯಿನಲ್ಲಿ ಒಬ್ಬ
ಖೇಡಿಯಿದ್ದನು
ತಂಬಾಕಿನಂಗ್ಡಿ ಕೆಲಸ
ಕಳೆದುಕೊಂಡನು.
ಬೇರೆ ಕೆಲಸ ಇಲ್ಲದೇನೇ
ತಕರಾರ್ಗೆಲ್ಲಾ ಕೈಯಹಾಕಿ
ಬೆಳಗಾಂವಿಗೆ ಬಂದು ನೆಲಸಿ
ಬಾಂದಿನೋರ ಜಗಳವನ್ನು
ಹೆಚ್ಚಿಸಿಟ್ಟನು !!

* * *



" ಸಂಗೀತದಿಂದ ಬೆಳೆ ಮುಖದ ಮೇಲೆ "

ಸ್ವತಂತ್ರ ಪಕ್ಷದ ಶಾಖೆಯೊಂದು ಚೀಣಾದಲ್ಲಿ ಸ್ಥಾಪಿಸಲ್ಪಡುತ್ತದೆ ಎಂಬ ಸುದ್ದಿಯು ನಿರಾಧಾರವಾದುದು.

—ಕಾಮರಾಜರನ್ನು ಚೀಣಾಶಾಖೆಯ ಅಧಿಕಾರಿಗಳನ್ನಾಗಿ ರಾಜಾಜಿಯವರು ನೇಮಿಸುತ್ತಾರೆಂಬುದೂ ಶುದ್ಧ ಸುಳ್ಳಿರಬಹುದು !

* * * *

ಲಂಚ್ ಹೊತ್ತಿಗೆ ನಮ್ಮ ಗುಂಡೋದರ ೮೦ ರನ್ ಗಳಿಸಿದ್ದು. ನಂತರ ಬ್ಯಾಟ್ ಎತ್ತೋ ಹೊತ್ತಿಗೇನೇ ಚಂಡು ವಿಕೆಟನ್ನು ಚದುರಿಸಿತ್ತಂತೆ.

* * * *

ಮಾನವ ಜಾತಕದಲ್ಲಿ—ದಶಮಗ್ರಹ

ಶಾರ್ವರಿ ಸಂವತ್ಸರದ ದೀಪಾವಳೀಗೆ ನಾವು ದಂಪತಿಗಳು ಹತ್ತನೆ ಅಳಿಯ ದೇವರನ್ನು ಬಿಜಯ ಮಾಡಿಸಿಕೊಂಡಿದ್ದೆವು. ಧೂಪ, ದೀಪ, ನೈವೇದ್ಯಗಳೆಲ್ಲಾ ಯಥಾಪ್ರಕಾರ ಉತ್ಸವಮೂರ್ತೀಗೆ ಸಾಂಗೋಪಾಂಗವಾಗೇ ನಡೆಯಿತು. ಅಳಿಯ ದೇವರಿಗೆ ಮುನಿಸು ಮೂಗಿನ ಮೇಲೆ ಇರುತ್ತೆ. ಸ್ವಲ್ಪ ಮೈಲಿಗೆಯಾದರೂ ಹಿಂದು ಮುಂದಾಗುವ ಗಾದೆಯ ದೇವರು! ಮಾವಂದರು ಬಲು ಹುಷಾರಾಗಿರಬೇಕು ಇಲ್ಲದಿದ್ದರೆ ದೀಪಾವಳಿ ಕೋಪಾವಳಿ ಆಗಿಬಿಡುತ್ತೆ!

ಸಾಲಾಗಿ ಹತ್ತುಜನ ಅಳಿಯಂದರನ್ನು ಹಿಡಿದು ಹಾಕಿ ಪಳಗಿಸಿ ಅಷ್ಟು ಜನಕ್ಕೂ ದೀಪಾವಳಿ ವ್ಯವಸ್ಥೆ ಮಾಡಿರುವ ನನಗೆ ಅಳಿಯಂದರನ್ನು ಉಪಚಾರ ಮಾಡುವ ಕಲೆ ರಕ್ತಗತವಾಗಿಬಿಟ್ಟಿದೆ. ನರಕ ಚತುರ್ದಶಿ ಹಿಂದಿನ ದಿವಸವೇ ರೈಲು ಬರೋ ಹೊತ್ತಿಗೆ ರೈಲ್ ಸ್ಟೇಷನ್ನಿಗೆ ಹೋಗಿ ಅಳಿಯಂದರು ಇಳಿದ ಕೂಡಲೇ ಕೊರಳಿಗೆ ಮಲ್ಲಿಗೆಹಾರ ಹಾಕಿ, ಎರಡು ಸಲ ಕೆಮ್ಮಿ, ಆರೋಗ್ಯವಾಗಿದೀರ? ಪ್ರಯಾಣ ಸುಖವಾಗಿತ್ತು ತಾನೆ? ಮಲಗುವುದಕ್ಕೆ ಜಾಗ ಸಿಕ್ಕಿತ್ತು ಅಂತ ಕಾಣುತ್ತೆ ಎಂತೆಲ್ಲಾ ಯೋಗಕ್ಷೇಮ ವಿಚಾರಿಸಿ ಜಟಕಾಗಾಡಿಯಲ್ಲಿ ಬುಟ್ಟಿ ಹೋಲ್ಡಾಲ್‌ಗಳ ಸಮೇತ ಅವರನ್ನು ಸಾಗಿಸಿಕೊಂಡು ಬಂದು ಸುಖವಾಗಿ ಮನೇಲಿಳಿಸಿ, ಲೇ ಕಮಲು, ಲೇ ವಿಮಲು, ಲೇ ಪದ್ದು, ಲೇ ಶೌರಿ ಅಂತ ಕೂಗಿ ಅಳಿಯಂದರ ಕಾಲ್ಗೆ ಬಿಸಿನೀರು ಕೊಟ್ಟು ಕೂಲಾಗಿ ಉಪಚಾರ ಮಾಡಿದೇನೆ! ಉದ್ದಕ್ಕೂ ಕುಂತೀದೇವಿಯರನ್ನು ಹೆತ್ತು ಅವಳೂನೂ ಅಳಿಯಂದರ ಕೈಲಿ ಹೆಣಗಿ ಚೆನ್ನಾಗಿ ಕುಕ್ಕಿಸಿಕೊಂಡಿದಾಳೆ ಅನ್ನಿ!

ಮೊದಲನೆಯ ಅಳಿಯನ್ನ ಹಬ್ಬಕ್ಕೆ ಕರೆಸಿಕೊಂಡಾಗ ಕಾಲ ಚೆನ್ನಾಗಿತ್ತು. ದೀಪಾವಳೀಗೆ ಬಂದ ಹಿರಿಯ ಅಳಿಯ ಯುಗಾದಿವರಿಗೂ ಇಲ್ಲೇ ಝಾಂಡ ಊರಿದ್ದ! ಮೂಲ ನಿವಾಸಿಯಂತೆ ನೆಲೆಸಿದ್ದ ಆರ್ಯ ಪುತ್ರನಿಗೆ ದೊಡ್ಡ ಮಗಳು ಉಪಚಾರ ಮಾಡಿದ್ದೂ ಮಾಡಿದ್ದೇ! ಯುಗಾದಿ ದಿವಸ ಜೋಯಿಸರನ್ನು ಅಳಿಯಂದರ ಹತ್ತಿರ ಕೂರಿಸಿ ಪ್ರದೋಷ ಕಾಲದಲ್ಲಿ ಪಂಚಾಂಗ ಶ್ರವಣ ಮಾಡಿಸಿದೆ! ಮಾರನೆ ದಿವಸವೇ ಉಟ್ಟಿದ್ದ ಪಂಚೆ ಅಂಗಿಗಳನ್ನು ಒಗೆಸಿಕೊಂಡು "ಊರಿಗೆ ಹೋಗಿ ಬರ್ತೀನೆ" ಅಂತ ಹೇಳಿ ಭೂಪತಿ ಮನೆಯಿಂದ ಕದಲಿದ! ಮುಖ್ಯವಾಗಿ ಹಳೇಕಾಲದ ಭೂಮಿ ಕಾಣಿ ಇದ್ದು ಹೆಂಡತೀನ ಕಾಪಾಡುವ ಲಕ್ಷಣಗಳಿತ್ತು. ಒಳ್ಳೆ ಶರೀರ. ಖುಷಿಯಾದಾಗ ವರದಾಚಾರ್ಯರ ನಾಟಕದ ಮಟ್ಟುಗಳನ್ನು ಹಾಡಿ ಅತ್ತೇನ ಬೆಚ್ಚಿ

ಬೀಳಿಸ್ತಿದ್ದ. ಜುಟ್ಟಿಗೆ ಹೂವು ಸುತ್ತುಕೊಂಡು ಜನಿವಾರಕ್ಕೆ ಬೀಗದ ಕೈ ಕಟ್ಟಿ ಬಲಿಪಾಡ್ಯಮಿ ದಿವಸ ಹಸೆ ಮೇಲೆ ಕೂತುಕೊಂಡ ಅಳಿಯನಿಗೆ-ಲಕ್ಷಣವಾಗಿ ಆರತಿ ಎತ್ತಿದರು. ಹಿರಿ ಅಳಿಯ ಅಂತ ಅವಳು ರುಚಿ ರುಚಿಯಾಗಿ ಅಡಿಗೆ ಮಾಡಿ ಹಾಕಿದಳು. ನಾನೇ ಸ್ವಲ್ಪ ಜಿಪುಣತನ ಮಾಡಿದ್ದೆ. ಮದುವೇಲಿ ಅವನಿಗೆ ಒಂದು ಚೊಂಬು ಮಾತ್ರ ಕೊಟ್ಟಿದ್ದೆ.

ಎರಡನೆ ಅಳಿಯ ಇ. ಪಿ. ಎಸ್. ಮಾಡಿಕೊಂಡು ನನ್ನಿಂದ ಕೇವಲ ಒಂದು ಕೋಟು ಪಡೆಯುವ ಹಕ್ಕು ಪಡೆದುಕೊಂಡಿದ್ದ ಆ ಕಾಲಕ್ಕೆ. ಅದಕ್ಕಿಂತಲೂ ಹೆಚ್ಚಿನ ಪಬ್ಲಿಕ್ ಸರ್ವಿಸ್‌ನ್ನು ನಾನು ಅವನಿಂದ ನಿರೀಕ್ಷಿಸಿರಲಿಲ್ಲ. ಪತ್ರ ವ್ಯವಹಾರದ ಚಟ ಇವನಿಗೆ. ಮದುವೆಯಾದ ಮೇಲೆ ದೀಪಾವಳಿತನಕ ಹದಿಮೂರು ಕಾರ್ಡು ಬರೆದಿದ್ದ. ದೀಪಾವಳಿ ನಂತರದ ದಿನಗಳಲ್ಲೂ ಅತ್ತೆ ಮಾಡಿದ ಅಡಿಗೇನೇ ಮೆಚ್ಚುತ್ತಿದ್ದ. ಹೆಂಡತಿ ಸಂಗಡ ಪಗಡೆಕಾಯಿ ಆಟ ಆಡಿ ಹಬ್ಬದ ಸುಖ ಕಂಡ!

ಮೂರನೆ ಅಳಿಯನ ದೀಪಾವಳಿ ಅಷ್ಟು ಅದ್ಧೂರಿಯಾಗಿ ನಡೆಯಲಿಲ್ಲ. ಯುದ್ಧ ಬಂದುಬಿಟ್ಟಿತ್ತು! ಹುಳೀಗೆ ತೊಗರೀಬೇಳೆ ಸಿಗುವುದೇ ಕಷ್ಟವಾಗಿತ್ತು. ದೀಪಾವಳೀಗೆ ಬಂದ ಅಳಿಯ ಪಠಾಣರಂತೆ ಮೀಸೆ ಬಿಟ್ಕೊಂಡು ಬಂದ. ಮೀಸೆ ರೌದ್ರವಾಗಿತ್ತೇ ಹೊರತು ಆಸಾಮಿ ಬಲು ಮೆದು. ಮಾತೂ ಅಷ್ಟೇ–ಆಕಾಶವಾಣಿಯಲ್ಲಿ ಸಂಗೀತದ ಪಾಠ ಕೇಳಿದ ಹಾಗಿರುತ್ತಿತ್ತು ಅಳಿಯಂದರು ಮಾತಾಡಿದರೆ! ಕಾಲಸ್ಥಿತಿ ನಾಜೂಕಾಗಿದೆ ಅಂತ ಎಲ್ಲಾ ಖೋತಮಾಡಿದ್ದೆವು. ದಕ್ಕಿದಷ್ಟೇ ಅಳಿಯನ ಪುಣ್ಯ! ಅಳಿಯಂದರು ದೀಪಾವಳಿ ಏರ್ಪಾಟು ನೋಡಿ ಬೆಳಿಗ್ಗೇನೇ ಸೆಲೂನಿಗೆ ಹೋಗಿ ಮೀಸೇನ ತೆಗೆಸಿಬಿಟ್ಟು ಬಂದರು. ಬಿಸಿಬಿಸಿಯಾಗಿ ಮೆಣಸಿನ ಸಾರು ಕುಡಿದು ಶಿಶು ಗೀತೆಗಳನ್ನು ವಾಚನ ಮಾಡಿದರು! ಆದರ್ಶಪ್ರಿಯ ನಮ್ಮ ಈ ಮೂರನೆ ಸನ್–ಇನ್–ಲಾ!

ನಾಲ್ಕು–ಐದನೆ ಅಳಿಯಂದರಿಗೆ ವರೋಪಚಾರ ಮಾಡಿ ದೀಪಾವಳಿ ಸಂಭ್ರಮಾನ ಮುಗಿಸುವ ಹೊತ್ತಿಗೆ ಮನೆ ಮಾರ್ಟಿಗೇಜ್ ಆಯ್ತು! ಯುದ್ಧ ಮುಗಿದು ಶಾಂತಿಯಾದರೂ ಅಳಿಯಂದರು ಬಿಸಿಯಾಗೇ ಇದ್ದರು. ನಾಲ್ಕನೆಯವನದು ಚಾರ್‌ಮಿನಾರ್ ಬ್ರಾಂಡು! ಐದನೆಯವನು ಆರಿಸಿಕೊಂಡದು ಮೂವತ್ತುಮೂರನೆ ನಂಬರು! ಪಾಪ, ಹೋಟಲೂಟ ಮಾಡಿ ಕಂಗೆಟ್ಟಿದ್ದವು. ಎಣ್ಣೆ ನೀರು–ಮತಾಪು-ಕೋಸಂಬ್ರಿ–ಕೀರು–ಸುರುಸುರುಬತ್ತಿ-ಹೋಳಿಗೆ-ಹಾರೋಪ್ಲೇನು-ಬೆಣ್ಣೆ ಕಾಯಿಸಿದ ತುಪ್ಪ–ಹೀರೆಕಾಯಿ ಬೋಂಡ....ದೇವೇಂದ್ರನ ಅಮರಾವತಿ ಅಂತ ತಿಳಿದುಕೊಂಡವು ಪೇಟೆ ಅಳಿಯಂದರು ರೇಡಿಯೋದಲ್ಲಿ ಸಿನಿಮಾ ಹಾಡು ಕೇಳುತ್ತಾ!

ಆರನೆಯವಳಿಗೆ ಕೈಕೊಟ್ಟವನೇ ಸಿಡಿಲುಘಟ್ಟದ ಅಳಿಯ. ಏರ್‌ಕ್ರಾಫ್ಟ್‌ನಲ್ಲಿ ಕೆಲಸ, ಹೇರ್‌ಕ್ರಾಫ್ಟ್‌ನಲ್ಲಿ ಗಟ್ಟಿಗ. ಇವನ ಕಾರು-ಬಾರು ನೋಡೋಕೆ ಆರೆಕ್ರೆ ಗದ್ದೆ ಹಣ ಚೆಲ್ಲಿದೆ! ಅಷ್ಟಾದರೂ ಅಗ್ರಿಮೆಂಟ್‌ನಂತೆ ಎಲ್ಲಾ ಬಾಬ್ತುಗಳೂ ಸರಿಯಾಗಿ ನಡೀಲಿಲ್ಲ. ದೀಪಾವಳಿಯಲ್ಲಿ ಅವನ್ನೆಲ್ಲ ಸರಿ ಮಾಡಬೇಕು ಅಂತ ರಾಗ ಎಳೆದು ಹೋಗಿದ್ದ. ಮಗಳು ದೀಪಾವಳೀಲಿ ಸರಿ ಮಾಡಿದಳು ಅನ್ನಿ! ಬಲಿಪಾಡ್ಯಮಿ ದಿವಸವೇ ಅಳಿಯನ ಸ್ವರ ಮನೆಯಲ್ಲಿ ಕೇಳಿಸಲಿಲ್ಲ. ಅಳಿಯ ತಣ್ಣಗಾಗಿದ್ದ! ಸೇಡನ್ನೆಲ್ಲಾ ಆಟಂಬಾಂಬುಗಳನ್ನು ಹಚ್ಚಿ ತೀರಿಸಿಕೊಳ್ಳುತ್ತಿದ್ದ. ನರಕಚತುರ್ದಶಿ ಆದ ನಾಲ್ಕನೆಯ ದಿವಸ ಜಂತೆಮೇಲಿಂದ ಒಂದು ಕೊಂಡಿ ಚೇಳು ಕೆಳಕ್ಕೆ ಬಿತ್ತು. ಅಳಿಯನ ಪಾದದ ಕಡೆ ಹರಿದುಕೊಂಡು ಹೋಗುತ್ತಿತ್ತು. ಅತ್ತೆ ಅಳಿಯ ಇಬ್ಬರೂ ಏಕಕಾಲದಲ್ಲಿ ಚೇಳನ್ನು ನೋಡಿದರು. ಅಳಿಯ ಗಾಬರಿಯಾದ-ಹಿಂದೆ ಅತ್ತೆ, ಮುಂದೆ ಚೇಳು! ಅತ್ತೇನೇ ಹೇಳಿದ್ದಳು-"ಗಾಬರಿ ಪಡಬೇಡಿ, ಅಳಿಯಂದರೆ-ಈ ಮನೇಲಿ ಚೇಳುಗಳು ಆಗಾಗ್ಗೆ ಕಾಣಿಸ್ಕೊಳ್ತಾ ಇರುತ್ತೆ" ಅಂತ! ಅಡಿಗೇ ಮನೆಗೆ ಹೋಗಿ ಒನಕೆ ತೆಗೆದುಕೊಂಡು ಬಂದು ಚೇಳನ್ನು ಧ್ವಂಸ ಮಾಡಿದಳು. ಮಗಳಿಗೆ ಹೇಳಿದಳು-"ಚೇಳುಗಳ್ತ್ರ ಕಾಣಿಸಿಕೊಂಡರೆ ಕೊಂಡಿ ಮುರೀಬೇಕಮ್ಮ" ಅಂತ!

ಸ್ವಾತಂತ್ರ್ಯ ಬಂದ ಮೇಲೆ ದೀಪಾವಳಿ ಕಂಡ ಅಳಿಯಂದರ ಥರಾನೇ ಬೇರೆ? ರಂಗಪ್ಪನ ದೀಪಾವಳಿಯಂತಲ್ಲ ಇವರದು. ನಮ್ಮ ಮನೆ ತಾರಾವಳಿಯ ಸಪ್ತ ಜಾಮಾತ ಮಂಡಲದ ಏಳನೆ ನಕ್ಷತ್ರ ಪ್ಲೀಡರು! ವೀಕ್ ಕಾನ್‌ಸ್ಟಿಟ್ಯೂಷನ್ನು! ಆದರೂ ದೀಪಾವಳಿ ದಿವಸ ಚಿನುಕುರಳಿ ಪಟಾಕೀನ ಗೀಚುತ್ತಾ ಅದರ ಸಮಕ್ಕೂ ಮಾತಾಡುತ್ತಿದ್ದ. ಅತ್ತೆ ಕಂಡರೆ ಮಾತು ನಿಲ್ಲಿಸುತ್ತಿದ್ದ. ಕಾಫಿ ಚಟ ಜಾಸ್ತಿ! ಅಭ್ಯಂಜನ, ಹಸೆ, ಹಾಡು, ಆರತಿ, ಆನೆಪಟಾಕಿ, ಮಗುಟ ಏನೂ ಬೇಡ ಅಂದ. 'ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆ್ಯಕ್ಟ್' ಓದಿದ್ದು ದಂಡ ಅಂತ ಅಂದುಕೊಂಡೆ. ಪ್ರತಿ ಅರ್ಧ ಗಂಟೆಗೊಂದು ಸಲ ಒಂದು ಕಪ್ ಸ್ಟ್ರಾಂಗ್ ಕಾಫಿ ಕುಡಿಸಿ ಕಳಿಸಿದೆವು!

ಎಂಟನೆಯವನೇ ಗೀತಾಬಾಲಿ ಗಂಡ. ಸಿನಿಮಾ ಸ್ಟಾರು ಹುಡುಗ. ಹೆಂಡತಿ ಜೊತೆ ಸಿನಿಮಾ ನೋಡುವ ಬಯಕೇನ ಇವ ತೀರಿಸಿಕೊಂಡಿದ್ದು ದೀಪಾವಳಿ ದಿನ. ಇವನ ಮಾತು, ಭಾಷೆ, ಶೈಲಿ, ಹಾಡು ಎಲ್ಲಾ ಸಿನಿಮೀಯ! ಆರತಕ್ಷತೇಗೆ ನಾಗ ಸ್ವರದ ಏರ್ಪಾಟು ಮಾಡಿದ್ದೆವು. ಅಳಿಯ ವಾದ್ಯ ಚೆನ್ನಾಗಿಲ್ಲ, ತಮಟೆ ಸದ್ದು ಕೇಳಿ ಬರುತ್ತೆ ಅಂತ ಹೇಳಿ ಮುನಿಸಿಕೊಂಡು ಹಸೆಮೇಲಕ್ಕೆ ಬರಲೇ ಇಲ್ಲ. ಆಗ ಪಕ್ಕದೂರಿನಿಂದ ಬ್ಯಾಂಡ್‌ಸೆಟ್ಟನ್ನು ಕರೆಸಿದೆವು. ಇಡೀ ಸೆಟ್ಟಿನವರು ಎರಡು ಗಂಟೆ ಕಾಲ "ಚಲ್ ಚಲ್ ರೆ ನವ್‌ಜವಾನ್" ಬಾರಿಸಿ ಕೆಡವಿದರು. ಅಳಿಯದೇವರು ಪ್ರಸನ್ನರಾಗಿ ಹಸೆಮೇಲಕ್ಕೆ ಬಂದು ಆರತಿ ಎತ್ತಿಸಿಕೊಂಡರು. ಈ ಅಳಿಯನಿಗೆ ಈಗ ನಾಲ್ಕು ಜನ ಮಕ್ಕಳು. ಎರಡು ಸಲವೂ ಅವಳಿ ಜವಳಿ! ಮನೇಲಿ ಜೋಡಿವಾಲ್ಗ

ಯಾವಾಗ್ಲೊ ತಪ್ಪೊಲ್ಲ. ಮಗಳು ಅಳಿಯ ಆಗಾಗ್ಗೆ ಬಂದು ಎರಡು ದಿನ ಇದ್ದು ಹೋಗ್ತಾರೆ. "ಚಲ್ ಚಲ್ ರೆ ನೌಜವಾ಼ನ್" ಪ್ಲೇಟು ಹಾಕೋ ಮರಿ ಅಂತ ನಾನೆಂದಾರೂ ಅಪ್ಪಿ ತಪ್ಪಿ ಅಂದರೆ ರಾತ್ರೀನೇ ಗಂಟುಮೂಟೆ ಕಟ್ಟಿ ಪೂನ ಮೈಲ್ ಹತ್ತುತ್ತಾರೆ.

ಒಂಭತ್ತನೆ ಅಳಿಯ ನಮ್ಮ ಶಾರೂನ ಶರಾವತಿ ಅಂತ ಕೂಗ್ತಾನೆ. ಶುದ್ಧ ಭಾವಜೀವಿ. ಕನ್ನಡ ಎಂ. ಎ. ದೀಪಾವಳಿ ದಿವಸ ಎದ್ದ ತಕ್ಷಣ ಅತ್ತೆಮಗಳ ಪೂರ್ವಾರ್ಧ ಕಂಡ ಅಳಿಯನಿಗೆ ಸ್ಫೂರ್ತಿ ಬಂದು ಒಂದು ಸೊಗಸಾದ ನವ್ಯ ಗೀತೆಯನ್ನು ಬರೆದು ಕನ್ನಡ ಸಾಹಿತ್ಯ ಸರಸ್ವತಿಯ ಅಡಿದಾವರೆಯಲ್ಲಿ ಅರ್ಪಿಸಿದ. ಪೂರ್ವೀಕರಾದ ಪಂಪ, ಕುಮಾರವ್ಯಾಸರೆಸಗಿದ ಪುಣ್ಯ ಫಲದಿಂದ ಕೋಟ್ಯಾಂತರ ಕನ್ನಡಿಗರಿಗೆ ಅದನ್ನೋದುವ ದುರ್ಗತಿ ಲಭಿಸಲಿಲ್ಲ! ಅತ್ತೆಯ ಕೃಪಾಕಟಾಕ್ಷದಿಂದ ಕಾರ್ತೀಕ ಶುದ್ಧ ಪಂಚಮೀ ದಿವಸ ಅನವ್ಯಕಾವ್ಯ ಬಚ್ಚಲುಮನೆ ಒಲೆಯಲ್ಲಿ ಬೆಂದು ಬೂದಿಯಾಯ್ತು! ಶಾಶ್ವತವಾದ ತಿರುನಕ್ಷತ್ರವಾಯಿತು! "ಇನ್ನೊಂದು ಬರೆದರೆ ಆಯ್ತು ಬಿಡಿ" ಎಂದು ಸಮಾಧಾನ ಹೇಳಿ ನಮ್ಮ ಶಾರು ಗಂಡನ ಕಾಲ್ಗೆ ಬಿಸಿನೀರಂ ಕೊಟ್ಟು, ತಿನಲ್ ತಿನಿವಣ್ಣಂ, ಕುಡಿಯಲ್ ಇನಿವಾಲಂ ಕೊಟ್ಟು ಪಕ್ಕದಲೆ ಮಂಡಿಸಿ ವೀಳಯಮಂ ಮಡಿಸೀಯುತಂ ಪತಿಯ ಸಂತೈಸಿದಳು ಮನೋರಮೆಯಂತೆ. ಅಲ್ಲಿಂದೀಚೆಗೆ ಅಳಿಯಂದರು ಯಾವ ಪದ್ಯಾನೂ ಬರೆದಂತೆ ಕಾಣಿಸಲಿಲ್ಲ. ಕರ್ನಾಟ ಕಾಂಬೆಯ ಸಂಸಾರದಲ್ಲಿ ಯಾವ ಕ್ರಾಂತಿಯೂ ನಡೆಯಲಿಲ್ಲ.

ಹೊಟ್ಟೆ ತುಂಬಿದ್ದರೆ ಹತ್ತನೆಯದರ ಕಥೆಯನ್ನೂ ಓದಿಬಿಡಿ, ಬೇಗ ಮುಗಿಸುತ್ತೇನೆ. ಈ ಅಳಿಯ ಕ್ಷೀರಸಾಗರ ಇದ್ದಂತೆ. ಹೊಟ್ಟೇಲಿ ಅಮೃತವೂ ಇದೆ! ವಿಷವೂ ಇದೆ! ದೀಪಾವಳಿ ದಿವಸ ನನ್ನನ್ನೇ ಬಲಿಚಕ್ರವರ್ತಿ ಅಂತ ತಿಳಿದುಕೊಂಡು ಮಹಾವಿಷ್ಣುನ ಅವತಾರವನ್ನು ತೋರಿಸಿದ! ಹಾಲಿನಲ್ಲೊಂದು ಹೆಜ್ಜೆ-ಅಡಿಗೇ ಮನೆಯಲ್ಲೊಂದು ಹೆಜ್ಜೇ ಇಟ್ಟುಕೊಂಡೇ ಬಂದ ಬಿರುಸಿನಿಂದ. ಮೂರನೆಯದನ್ನೆಲ್ಲಿಡುತ್ತಾನೋ ನೋಡೋಣ ಅಂತ ಧೈರ್ಯವಾಗೇ ಇದ್ದೆ. ನನಗೇನು ಭಯ? ಭೂಮಿ ಕಾಣಿಯೆಲ್ಲಾ ಭೋಗ್ಯದಾರನ ಸುಫರ್ದಿನಲ್ಲಿತ್ತು! ಅಳಿಯ ಫಾಟಿ. ನವ್ಯ ಸರಸಿ! ಕಾದಂಬರಿಯನ್ನು ಹಿಪ್ ಪಾಕೆಟ್‌ನಲ್ಲಿಟ್ಟಿದ್ದ! ಹೆಂಡತಿ ಮುಖಾನ ನೋಡಿದ ತಕ್ಷಣ "ಹಲ್ಲೋ!....ಹೇಗಿದೀಯಮ್ಮ!" ಅಂತ ಬೆನ್ನ ಮೇಲೆ ಬಾರಿಸುತ್ತಾ ಪಿಂಗ್‌ಪಾಂಗ್ ಆಟ ಆಡುವಂತೆ ಅರೆಕ್ಷಣ ವಾಲಾಡಿದ. ಅಳಿಯನ ಆಗಮನ ವನ್ನರಿತ ಅತ್ತೆ ಸೌಟುಪಾಣಿಯಾಗೇ ನಿಂತುಕೊಂಡಳು. ಅಳಿಯ ತಾನು ತಂದಿದ್ದ ಹೂವು ಹಣ್ಣಿನ ಬುಟ್ಟಿಯನ್ನು ಅತ್ತೆಮುಂದಿಟ್ಟು ಕ್ಷೇಮ ಸಮಾಚಾರಗಳನ್ನೆಲ್ಲಾ ಮುದ್ದು ಮುದ್ದಾಗಿ ಕೇಳಿದ. ಬದುಕಬಲ್ಲ ಅಳಿಯ ಇವ ಎಂದು ನನಗೆ ಅರ್ಥವಾಗಿ ಹೋಯಿತು! ಪುಟ್ಟಪ್ಪನವರು ಇನ್ನೊಂದು, "ಬೆರಳ್‌ಗೆಕೊರಳ್" ನಾಟಕ ಬರೆಯ

ಬಾರದೆ ಎನ್ನಿಸಿತು! ಅತ್ತೆಯ ಮೆಚ್ಚಿಕೆಯನ್ನು ಗಳಿಸಿದ ತ್ರಿವಿಕ್ರಮನು ಮೂರನೆ ಹೆಜ್ಜೆಯನ್ನು ಇಟ್ಟೇ ಇಟ್ಟಿದ್ದ—"ಪುಷ್ಯರಾಗದ ಉಂಗುರಾನೇ ತೆಗೆದುಕೊಂಡುಬನ್ನಿ" ಎಂದು ಅವಳು ಶಿಫಾರಸು ಮಾಡಿದಳು. ಕಾರ್ತೀಕದಲ್ಲಿ ಪುಷ್ಯರಾಗ ಎಲ್ಲಿ ಸಿಗುತ್ತೆ ಎಂದೆ? ಜವಾಹಿರಿ ಅಂಗಡೀಲಿ ಅಂತ ಮಗಳು ಸಂಧ್ಯಾರಾಗ ಹಾಡಿದಳು! ಯಥಾ ಪ್ರಕಾರ ಹಬ್ಬದ ಸಾಮಾನುಪಟ್ಟಿ ಬರೆಸಿಕೊಂಡು ಪೇಟೆಗೆ ಹೋದೆ. ಜವಾಹಿರಿ ಅಂಗಡಿಗೆ ಹೋಗುವುದಕ್ಕೆ ಮುಂಚೆ ತರಕಾರಿ ಮಾರ್ಕೆಟ್ಟಿಗೆ ನುಗ್ಗಿದೆ. ಕೃಷಿ ಪಂಡಿತ ಭಾರಿ ಭೂದುಗುಂಬಳವನ್ನು ಒಂದರಪಕ್ಕದಲ್ಲೊಂದು ಜೋಡಿಸಿಡುತ್ತಿದ್ದ. ಸಾಲಂಕೃತ ಕನ್ಯಾದಾನ ಪಡೆದ ಅಳಿಯಂದರನ್ನು ದಂಪತಿ ಪೂಜೇಗೆ ಸಾಲಾಗಿ ಕೂರಿಸಿದಂತಿತ್ತು ಆ ನೋಟ! "ಎಷ್ಟಯ್ಯ ಒಂದು" ಅಂತ ಕೇಳಿದೆ.

"ಯಾವುದು ಬೇಕಾದ್ರೂ ತೊಗೊಳ್ಳಿ ರಾಯ್ರೆ, ಎರಡೂಕಾಲು ರೂಪಾಯಿ" ಅಂದ.

"ಯಾಕಯ್ಯ ಇದಕ್ಕೆ ಇಷ್ಟೊಂದು ಬೆಲೆ" ಎಂದೆ.

ಅವ ಎಂಥ ಖದೀಮ ಅಂತೀರಿ. ಟೋಪಿ ಹಾಕ್ಕೊಂಡು ಬಟಾಣೆ ಬಿಡುಸುತ್ತಾ ನನ್ನ ಕಿವೀಲಿ ಮಿನುಗುತ್ತಿದ್ದ ಹತ್ತಕಡಕುಗಳ ಕಡೆ ದೃಷ್ಟಿ ಹೊರಳಿಸಿ ಹೇಳುತ್ತಾನೆ- "ಅಳಿಯಂದರು ಬಂದಿರೋ ಮನೇಗೆ ಬಲು ಪಸಂದಾದ ತರಕಾರಿ ರಾಯ್ರೆ ಅಂತ.

"ಸರಿ ಕಣಯ್ಯ....ನಿನ್ನೇಗಿಂತ ಈವತ್ತು ಹೆಚ್ಚಿಗೆ ಬೆಲೆ ಹೇಳುತ್ತೀಯಲ್ಲಯ್ಯ" ಎಂದೆ.

"ಬೆಲೆಗಳೇ ಹಾಗೆ ರಾಯರೆ—ನಿನ್ನೆ ಇದ್ದಿದ್ದು ಇವತ್ತು ಇರೊಲ್ಲ ...ಸರ್ಕಾರದ ಹಾಗೆ" ಎಂದ!

"ಸರ್ಕಾರದ ಬೆಲೆ ಇಳೀತಾ ಇದೆಯಲ್ಲಯ್ಯ" ಅಂದೆ.

"ತರ್ಕಾರಿ ಬೆಲೆ ಏರ್ತಾ ಇದೆ ರಾಯರೆ" ಅಂದ.

"ಒಳ್ಳೆ ಬೂದಿ ಮುಚ್ಚಿದ ಕೆಂಡ ಕಾಣಯ್ಯ ನೀನು" ಅಂತ ಅವನನ್ನು ತಾರೀಫ್ ಮಾಡಿದೆ.

"ಈ ಬೂದಿ ಮುಚ್ಚಿದ ಪಿಂಡದ ವ್ಯಾಪಾರವೇ ಹೀಗೆ ರಾಯ್ರೆ-ದುಬಾರಿ ಅಳಿಯಂದರಂತೆ" ಎಂದ. ಇಷ್ಟು ಚೌಕಾಶಿ ಮಾಡಿದರೂ ನಾಲ್ಕಾಣೆ ಕಡಮೆ ಕೊಟ್ಟು ಹೋಗಿ ರಾಯ್ರೆ ಅಂತ ಅವನ ಬಾಯಿಂದ ಬರಲಿಲ್ಲ. ನಾನೂ ಬಿಡಲಿಲ್ಲ. "ಬಿಡಯ್ಯ ಕಂಡಿದೀನಿ ...ಏನ್ ಮಹಾ ತರ್ಕಾರಿ-ಅಳಿಯಂದರ ಹಾಗೇನೇ, ಮೇಲೆಲ್ಲಾ ಬೋಳು ಒಳಗೆಲ್ಲಾ ಟೊಳ್ಳು" ಎಂದೆ.

“ ಬಯಸಿ ಬಯಸಿ ಇಂಥ ಮಾತು ಆಡ್ತೀರಲ್ಲ ರಾಯ್ರೆ ...ಮಜ್ಜಿಗೆ ಹುಳಿ, ದಂರೋಟ್, ಸೊಂಡಿಗೆ ಜ್ಞಾಪಿಸಿಕೊಳ್ಳಿ ರಾಯರೆ, ಕೈವಲ್ಯ ಪ್ರಾಪ್ತವಾಗುತ್ತೆ, ಎರಡು ರೂಪಾಯಿ ಮುಖ ನೋಡಿ ಅಳಿಯಂದರಿಗೆ ಅನ್ಯಾಯ ಮಾಡಬೇಡಿ ರಾಯ್ರೆ ” ಅಂತ ನಾಲಗೆ ಹೊರಳಿಸಿದ, ಜೀವನದಲ್ಲಿ ನುರಿತು ನರೆತಿದ್ದ ಕೃಷಿ ಪಂಡಿತ. ನನ್ನ ಬಾಯಿಂದ ಇನ್ನೊಂದು ಮಾತು ಹೊರಡಲಿಲ್ಲ. ಹತ್ತು ಜನ ಅಳಿಯಂದರ ಹೊಡತವನ್ನು ನಾನು ತಡಕೊಂಡಿರುವುದರ ರಹಸ್ಯವೇ ಅದೆಂದು ನನಗೆ ಭಾಸ ವಾಯಿತು. ಎರಡೂಕಾಲು ರೂಪಾಯಿ ಕೊಟ್ಟು ಬೂದುಗುಂಬಳಾನ ಕೊಂಡು ಹೆಗಲಮೇಲೆ ಹೊತ್ತುಕೊಂಡೆ. ಜಾವಾಹಿರಿ ಅಂಗಡೀಗೆ ಹೋಗಿ ಉಂಗುರಾನ ಕೊಂಡುಕೊಂಡು ಮನೆಗೆ ಬಂದೆ. ಮನೆಯಲ್ಲಿ ಅಳಿಯಂದರ ರಾಜ್ಯದ ಅಧ್ಯಕ್ಷಣಿ ಹೆಗಲಮೇಲಿಂದ ಬೂದುಗುಂಬಳಕಾಯನ್ನು ಇಳಿಸಿದಳು. ಅಳಿಯ ಮಗಳು ಇಬ್ಬರು ಥಾಂಡಿಗ ಭಾವ ಮೈದಂದರೂ, ಓಟ್ ಹೌಸಿನ ಹೆಚ್. ಎಂ. ಟಿ. ಅಳಿಯ ಎಲ್ಲರೂ ಸೇರಿಕೊಂಡು ಆಗಲೇ ಇಸ್ಪೀಟ್ ಆಟವನ್ನು ಪ್ರಾರಂಭಿಸಿದ್ದರು. ಉಂಗುರ ಚೆನ್ನಾಗಿದೆಯೇನೆ? ನೋಡೆ ಎಂದು ಪೊಟ್ಟಣ ಬಿಚ್ಚಿದೆ. ಅವಳು ಒಪ್ಪಿ ಮಗಳ ಕೈಗೆ ಕೊಟ್ಟಳು “ ಬೆರಳಿಗೆ ಸರಿಹೋಗುತ್ಯೆ ನೋಡೆ ” ಎಂದು.

ಅಳಿಯಂದರು ಬೆರಳಿಗೆ ಉಂಗುರ ಇಟ್ಟುಕೊಂಡು ಡೈಮಂಡ್ ಇಳಿದರು.


ಮಗಳು ಕಳಾವರ್‌ನಿಂದ ಕಟ್ ಮಾಡಿದಳು.

“ ಗುಲಾಮ ಎಲ್ಲಿ? ಎಲ್ಲಿ ? ” ಎಂದ ಪಕ್ಕದ ಮನೆ ಅಳಿಯ.

“ ಇಲ್ಲ! ಇಲ್ಲ! ” ಎಂದೆ ನಾನು.

ಅಳಿಯ ಷೋ ಮಾಡಿ ಆಟ ಆಯ್ತು ಅಂದ. ಒಬ್ಬರಾದ್ರೂ ನನ್ನ ಕಿವೀಲಿದ್ದ . ಹತ್ತ ಕಡಕುಗಳು ಮಾಯವಾಗಿದ್ದುದನ್ನು ಗಮನಿಸಲೇ ಇಲ್ಲ!

—ಹಾ. ರಾ.



ನೋಟೀಸ್

ಪುರಸಭಾಧ್ಯಕ್ಷರ ಶ್ರೀ ಪಾದಚರಣಗಳಲ್ಲಿ ಮರ್ಕುಂ ಮೂಳ್ಳರಿನ ರೈತಾಪಿಗಳು ಸಮರ್ಪಿಸುವ ನೋಟೀಸ್ ಏನೆಂದರೆ,

ಸ್ವಾಮಿನ್,

ತಾವು ನಮ್ಮೂರಿಗೆ ಬಾನುಲಿಯನ್ನು ಕೊಟ್ಟಿರುವುದು, ವೇದ್ಯ ವಿಷಯವಷ್ಟೆ. ಈ ಬಾನುಲಿಯಿಂದ ನಮಗೆ ಮಹದುಪಕಾರವಾಗುವುದೆಂಬ ಭರವಸೆಯಿಂದಲೇ, ತಾವು ನಮ್ಮ ಗ್ರಾಮಪಂಚಾಯಿತಿಗೆ, ಬಾನುಲಿಯನ್ನು ದಯಪಾಲಿಸಿದಿರಿ, ಎಂದು ನಂಬುತ್ತೇವೆ. ಆದರೆ ಅದರಿಂದ ನಮಗೆ ಉಪಕಾರವಾಗುವುದಂತಿರಲಿ, ಅಪಕಾರವೇ ಜಾಸ್ತಿಯಾಗಿದೆ.

ಅನಾನುಕೂಲಗಳು :—

1. ನೀವು ಬಾನುಲಿಯನ್ನು ಕೊಡಲಿಕ್ಕೆ ಮುಂಚೆ, ನಾವು ರೈತಾಪಿಗಳು, ಅನೂಚಾನವಾಗಿ ಬಂದ ನಮ್ಮ ಹಿರೀಕರ ಋಜು ಮಾರ್ಗವನ್ನೇ ಅನುಸರಿಸಿ, ಬೀಜ ಬಿತ್ತುತ್ತಿದ್ದೆವು, ಬೆಳೆ ತೆಗೆಯುತ್ತಿದ್ದೆವು. ಮಳೆ ಬೆಳೆಯ ಅನುಕೂಲ್ಯ ತತ್ಕಾಲಕ್ಕೆ ಒದಗಿ ಕೃಷಿಕಾರ್ಯ ಸಾಂಗವಾಗಿ ಸಾಗಿತ್ತು. ಆದರೆ ತಾವು ನಮ್ಮೂರಿನಲ್ಲೇ ರೇಡಿಯೋ ಸ್ಥಾಪಿಸಿದ ಮೇಲೆ, ನಾವು ಅದರಲ್ಲಿ ಪ್ರಸಾರ ಮಾಡುವ ಹವಾಮಾನ, ವಿವರಣೆಯನ್ನು, ಕೇಳಿಕೊಂಡು, ವ್ಯವಸಾಯ ಮಾಡಲು ತೊಡಗಿದಂದಿನಿಂದ ತೊಡಕಿಗೆ ಸಿಕ್ಕಿಕೊಂಡಿದ್ದೇವೆ.

"ಒಳ್ಳೆ ತಣ್ಣನೆಯ ಹವಾಮಾನ, ತುಂತುರು ಮಳೆಯಾಗುವ ಸಂಭವ, ಬಿತ್ತನೆಗೆ ಅನುಕೂಲವಾದ ಹವೆ" ಅಂತ ನಿಮ್ಮ ಬಾನುಲಿ ಉಲಿದಾಗ, ನಾವು ಬೀಜ ಬಿತ್ತಿದೆವು. ಆದರೆ ಹವಾಮಾನ, ಒಣಶಖೆಗೆ ಮಾರ್ಪಟ್ಟು, ಸೂರ್ಯ ಕೆಂಡದಂತೆ ಸುಟ್ಟು, ಬಿತ್ತಿದ ಬೀಜಗಳೆಲ್ಲಾ ಒಣಗಿ ಕೆಂಗಾಲಾದವು. "ಈ ದಿನ ಸುಡು ಸುಡು ತೇವವಿಲ್ಲದ ಹವೆ, ಮಳೆ ಹನಿಯೂ ಬರುವ ಸಂಭವವಿಲ್ಲ. ನಾಟಿ ಹಾಕಲು ಶುಭದಿನ" ಅಂತ ನಿಮ್ಮ ಬಾನುಲಿ ನುಡಿದಾಗ, ನಾವು ನಾಟಿ ಹಾಕಿ ಕೈ ಸುಟ್ಟುಕೊಂಡೆವು. ಅದೇ ದಿನ ಸಿಡಿಲು ಗುಡುಗಿನಿಂದ ಕೂಡಿದ ರುಸ್ತುಂ ಮಳೆ ಹುಯ್ದು, ಪೈರಿನ ಸಸಿಗಳೆಲ್ಲಾ, ಕಣ್ಣಿಗೆ ಕಾಣದ ಹಾಗೇ ಕೊಚ್ಚಿಹೋಯಿತು.

2. ನಮ್ಮೂರಿನ ರೈತಾಪಿಗಳಿಗೆ, ನಿಮ್ಮ ಬಾನುಲಿ ಬರಲಿಕ್ಕೆ ಮುಂಚೆ, ನಮ್ಮ ಊರಾಚೆಯ ವ್ಯವಹಾರ ವಿಚಾರಗಳೇ ಗೊತ್ತಿರಲಿಲ್ಲ. ಆಗ ನೋಡ್ರಿ ನಾವು ನೆಮ್ಮದಿಯಾಗಿದ್ದೆವು ಸುಖ, ಸಮೃದ್ಧಿ, ಶಾಂತಿ, ಎಲ್ಲವೂ ಇತ್ತು ನಮ್ಮೂರಲ್ಲಿ. ಆದರೆ ನಮ್ಮ ಶನಿ ಬಾನುಲಿ ನಮ್ಮೂರಿನ ಶಾಂತಿಗೆ ಭಂಗ ತಂದಿತು. ರೈತಾಪಿಗಳಿಗೆ ದೇಶ ವಿದೇಶಗಳ ವಾರ್ತೆಗಳನ್ನು ಅದು ತಿಳಿಸಿತು. ಅವರಿಗೂ ಆಟಂ, ಕೊಬಾಲ್ಟ್ ಬಾಂಬುಗಳ ಪಟ್ಟಿ, ಸ್ಪುಟ್ನಿಕ್‌ಗಳ ತಯಾರಿಕೆ, ರಷ್ಯಾ, ಅಮೆರಿಕೆಯ 'ತಂಡಿಯುದ್ಧ' ಎಲ್ಲವೂ ತಿಳಿಯುವಂತಾಯ್ತು. ಕಸವುಬು ಯಾರು? ಶೋಂಬೆ ಎಂತಹವನು? ಉಮುಂಬಾಗೆ ಯಾರ ಕುಮ್ಮಕ್ ಇದೆ, ಮುಂತಾಗಿ, ನಮ್ಮೂರಿನವರಿಗೆ ತಿಳಿಯಿತು. ಈ ವಿಪರೀತ ಜ್ಞಾನಾರ್ಜನೆಯಿಂದ ನಮ್ಮೂರಿನವರು ಕದನಕುತೂಹಲಿಗಳಾಗಿದ್ದಾರೆ. ನಮ್ಮೂರಿನ ಮುಕ್ಕಾಲು ಭಾಗ ಜನ ಉಮುಂಬಾ ಕಡೆಗೆ ವಾಲಿದರು. ಕಾಲುಭಾಗ ಕಸವುಬುವನ್ನು ಎತ್ತಿ ಹಿಡಿದರು. ಸರಿ, ಆಫ್ರಿಕೆಯಲ್ಲಿ ನಡೆಯಬೇಕಾದ ಕದನ, ನಮ್ಮ ಮುಳ್ಳೂರಿನಲ್ಲೇ ದಿನಂಪ್ರತಿ ನಡೆಯುತ್ತಿದೆ. ಇದಕ್ಕೆಲ್ಲಾ ನಿಮ್ಮ ಬಾನುಲಿಯೇ ಮೂಲಕಾರಣ ಅಂಬೋದನ್ನ ನಾವು ಸಾಬೀತು ಪಡಿಸಲು ತಯಾರಿದ್ದೇವೆ.

3. ನಮ್ಮೂರಿನ ತರುಣ ತರುಣಿಯರು ಸಿನಿಮಾಶೋಕಿಗೆ ಇಳಿದಿದ್ದೆ, ನಿಮ್ಮ ಬಾನುಲಿಯದೆಶೆಯಿಂದ ಸಿಲೋನಿನ ಸಂಗೀತಕ್ಕೆ ಕಿವಿ ಹಚ್ಚಿ ಕುಳಿತರೆ ಅವರಿಗೆ ಮಿಕ್ಕಾವ ಕಸಬೂ ಬೇಡವಾಗಿದೆ. ಸಿಳ್ಳೆಕ್ಯಾತಗಳಂತೆ, ಸಿನಿಮಾ ಸಂಗೀತದ ಶಿಳ್ಳೆ ಹಾಕುತ್ತಾ, ಮನ್ನಾಡೆ ಕ್ರಾಪು ಬಿಟ್ಟು, ಲತಾಮಂಗೇಶರ ಸ್ನೋ ಹಚ್ಚಿ, ಮುಖೇಶ್ ಮಫ್ಲರನ್ನು ಕತ್ತಿಗೆ ಸುತ್ತಿ ಓಡಾಡುವುದೆ, ನಮ್ಮ ತರುಣರ ಕಸುಬಾಗಿದೆ. ಕಾಲು ಇಂಚು ಕೆಸರು ಗದ್ದೆ ಉಳುವ ತ್ರಾಣವೂ ಅವರಿಗಿಲ್ಲ. ಹೀಗೆ ನಮ್ಮ ಮುಂದಿನ ಪೀಳಿಗೆಯನ್ನೇ ಹಾಳು ಮಾಡುತ್ತಿರುವ ನಿಮ್ಮ ಬಾನುಲಿಗೆ ಧಿಕ್ಕಾರವಿರಲಿ.

4. ಕಡೆಯದಾಗಿ, ನಿಮ್ಮ ಬಾನುಲಿ, ಕೂಗುವ ಸಂಗೀತವನ್ನು ಕೇಳಿ, ಕೇಳಿ, ನಮ್ಮ ಹಿರೀಕ ರೈತ ಬಾಂಧವರಿಗೆ, ಸಂಗೀತದ ಮೇಲೆ ಅಸಹ್ಯ ಹುಟ್ಟುವಂತಾಗಿದೆ. ರೇಡಿಯೋ ಹಾಡುವ ಸಂಗೀತ ನಿಜವಾದ ಸಂಗೀತವಾಗಿರುವ ಪಕ್ಷಕ್ಕೆ ಈ ಸಂಗೀತವೇ ಬೇಡ ಎನ್ನುತ್ತಾರೆ, ನಮ್ಮ ಜನ. ಹೀಗಾಗಿ ಜನ ರಾಗದ್ವೇಶಿಗಳಾಗಿದ್ದಾರೆ. ನಿಮ್ಮ ಬಾನುಲಿಯ " ಕರ್ ಕರ್ ಕರ್ ಡಬಡಬಾಡಬ್ ಗುರ್ ಗುರ್...." ಇತ್ಯಾದಿ ನಾದ ವಿಕಾರಗಳಿಂದ, ನಮ್ಮ ರೈತಾಪಿ ಜನರ ಕಿವಿ ತಮಟೆ ಒಡೆದಿದೆ. ಸಾಮೂಹಿಕ ಜಾನಪದ ಗೀತೆ, ಕೋಲಾಟಗಳ ಉಲಿಯನ್ನು ಕೇಳುವ ಅನೇಕರ ತಮಟೆಯೂ ಒಡೆದಿದೆ. ಅಂತೂ ನಿಮ್ಮ ಬಾನುಲಿಯ ಹಾವಳಿಯನ್ನು ತಾವೇ ಖುದ್ದು ಅನುಭವಿಸ ಬೇಕೆಂದು, ನಮ್ಮ ವಿನಮ್ರ ಕೋರಿಕೆ.

ಈ ಮೇಲ್ಕಂಡ ಕಾರಣಗಳಿಗೂ, ಹಾಗೂ ಇದರಲ್ಲಿ ನಮೂದಿಸಲಾಗದ, ಇತರೆ ಕಾರಣಗಳಿಗೂ, ನಾವು ನಿಮ್ಮ ಬಾನುಲಿಯ ಪೆಟ್ಟಿಗೆಯನ್ನು ಒಡೆದು ಒಲೆಗೆ ಹಾಕ ಬೇಕೆಂದಿದ್ದೇವೆ. ಕಾರಣ ಈ ಕ್ಷಣವೇ ಅದನ್ನು ಹಿಂತಿರುಗಿ ಕೊಂಡು ಹೋಗಿ. ಇಲ್ಲದಿದ್ದರೆ ಒಂದು ವಾರದ ನಂತರ ನಾವೇ ಒಡೆದು ಒಲೆಗೆ ಹಾಕುತ್ತೇವೆ.

ಇತಿ,

ರೈತಾಪಿಗಳು,

ಮುಳ್ಳೂರು.

—ಕೆ. ಎನ್. ಕಿಟ್ಟೈನ್.



" ನೋಡು ನಮ್ದೇಶದ ಕಲೆ ಕೂಡ ಇಲ್ಲದೆ. ಆದ್ದರಿಂದ ನಮ್ಮವರು ಆ ಕಾಲದಲ್ಲಿ ಇಲ್ಲಿದ್ರು ಅಂತ ತೋರ್ಸತ್ತೆ "

ಆ ನೆರಮನೆಯ ಹುಡುಗಿ !

ಪರಿಚಿತ ! ಚಿರಪರಿಚಿತ ವೀನಡಗೆ
ಹತ್ತಾರು ವರುಷಗಳ ಹಿಂದೆಲ್ಲೊ ನೋಡಿದ ನೆನಪು
ಏನು ಶೃಂಗಾರ-ವೈಯ್ಯಾರ-ಒನಪು
ಓ ! ಅವಳೆ-ಹಂಸಗಮನೆ
ಆ ನನ್ನ ನೆರೆಮನೆಯ ಹುಡುಗಿ
ತೊಂಡೆಹಣ್ಣಿನ ಅಧರ-ಮತ್ಸ್ಯನಯನೆ
ಕೊಡಗಿನ ಕಿತ್ತಲೆಯ ಕೆನ್ನಯ ಬೆಡಗಿ
[ಸಿಂಹಸೊಂಟನಿ-ಆವಕುಂಟನಿ]
ಕಣ್ಣ ಕೊನೆಯಂಚಿನಲ್ಲಿ ಕುಣಿಸಿ ಮಣಿಸಿ
ನನ್ನ ಮನ ಸೆಳೆದು ಬಿಗಿದು ಕಟ್ಟಿದ ಹುಡುಗಿ
ಹತ್ತಾರು ವರುಷಗಳ ನೆನಪು
....
ಮೂರು ಮಕ್ಕಳ ಮಾತಾಯಿ ಗಜಗಮನೆ
ಸೊಂಟವನೇರಿ ಅಮ್ಮಾ ಎಂದೊರಲಿತು
ಮಗು ತೆರೆದಿತು ಬಾಯಿ
ನಿರ್ವ್ಯಾಮೋಹ
ಬೊಜ್ಜು ಬೆಳೆದಿಹ ದೇಹ
ಬಣ್ಣಮಾಸಿದ ಊದಿದ ಕೆನ್ನೆ
ಇಂದು ಇವಳು ಮುವ್ವತ್ತರ ಗಡಿದಾಟಿದ ಕನ್ನೆ
"ಹತ್ತು ವರುಷಗಳಂತರ
ಮಾಡಿದೆ ಏನು ಅವಾಂತರ !"
ಕೊಡಗಿನ ಕಿತ್ತಲೆಯ ಕೆನ್ನೆಯ ಬೆಡಗಿ
ನನ್ನ ಮನಸೆಳೆದು ಬಿಗಿದು ಕಟ್ಟಿದ
ಆ ನೆರಮನೆಯ ಹುಡುಗಿ !

* * *

ಮುವ್ವತ್ತರ ಗಡಿದಾಟಿತು
ಹಣ್ಣಾಯಿತು-ಕಾಯಿ
ಮೂರು ಮಕ್ಕಳ ಮಾತಾಯಿ

* * *

ಪರಿಚಿತ ಚಿರಪರಿಚಿತ ವೀನಡಗೆ
ಓ ಅವಳೇ-ಆ ನನ್ನ ಹಂಸಗಮನೆ
ನನ್ನ ನೆರಮನೆಯ ಹುಡುಗಿ

—"ಎಚ್ಚೆವಿಪ್ಪಿ"

ರತಿ ವಿಲಾಪ

———

ಅವನ ಹೆಸರು ಕಾಮಪ್ಪ. ದಯವಿಟ್ಟು ನೀವು ನಗಬೇಡಿ. ಅವನು ಆ ಹೆಸರಿಗಾಗಿ ಪಟ್ಟ ಯಾತನೆಯನ್ನು ಬಲ್ಲಿರಾದರೆ ಕನಿಕರಪಡಬಹುದಾಗಿದೆ. ಆ ಹೆಸರಿಗಾಗಿ ಸ್ಕೂಲಿನಲ್ಲಿ ಬಾಲಕರೆಲ್ಲರೂ ಅವನನ್ನು ಸುತ್ತುಗಟ್ಟುತ್ತಿದ್ದರು; ಆ ಹೆಸರಿಗಾಗಿ ಫೈರ ಬ್ರಿಗೇಡಿನವರನ್ನು ಕಿಡಿಗೇಡಿಗಳು ಅವನ ಕಡೆ ಕಳುಹಿಸಿದ್ದುಂಟು. ಅದೆಲ್ಲವನ್ನು ಸಹಿಸಿಕೊಂಡು ಹೆಸರಿಗೆ ಅನುರೂಪನಾಗಿಯೆ ಬೆಳೆದನು; ಬರೀ 'ಅನುರೂಪ' ಅಲ್ಲ, ಅನ್ವರ್ಥನೂ ಆಗಿದ್ದಾನೆ. ಗೊತ್ತಿದೆಯ ನಿಮಗೆ? ಹಿಂದೊಮ್ಮೆ ಸಾಕ್ಷಾತ್ ಶಿವನನ್ನು ಎದುರಿಸುವ ಸಾಹಸದಲ್ಲಿ ಮುಂದಾಳಾದವನ ಹೆಸರೂ ಕಾಮಣ್ಣ; ಆ ಹೆಸರಿನವರಲ್ಲಿ ಮುಂದಾಳುತನ ಹುಟ್ಟುಗುಣವಾಗಿದೆಯೇನೊ! ಇಂದಿನ ಈ ಕಾಮಪ್ಪ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದ; ಇವನನ್ನು ಪೀಡಿಸಲು ಬಂದ ಆಧುನಿಕ ಶಿವ ಮೂರನೆಯ ಕಣ್ಣನ್ನು ತೆಗೆಯುವುದಂತಿರಲಿ; ಇದ್ದ ಎರಡು ಕಣ್ಣುಗಳನ್ನೆ ಮುಚ್ಚಿಕೊಂಡಿದ್ದ, ಕಾಮಪ್ಪ ಅವನನ್ನು ಚನ್ನಾಗಿ ಥಳಿಸಿದ್ದಕ್ಕೆ. ಇದಕ್ಕಾಗಿ ಕಾಮಪ್ಪನಿಗೆ ಇನ್ನೂ ಕೆಲ ಹೆಜ್ಜೆ ಮುಂದೆ ನಡೆದು ಜೇಲಿಗೆ ಹೋಗಬೇಕಾಯಿತು ಮೂರು ತಿಂಗಳ ಮಟ್ಟಿಗೆ.

ಈಗ ಕಾಮಪ್ಪನ ತಮ್ಮನಾದ ಸೋಮಪ್ಪನನ್ನು ನಾವು ನೋಡೋಣ, ಯಾಕೆಂದರೆ ಕಾಮಪ್ಪ ಜೇಲಿಗೆ ಹೋಗುವ ಮುಂಚಿತ ರತಿ ಎಂಬಾಕೆಯಕೂಡ ಅವನ ಮದುವೆಯ ಚರ್ಚೆ ನಡೆದಿತ್ತು. ಕಾಮಪ್ಪನ ಹೊಡೆತಕ್ಕೆ ಕಣ್ಮುಚ್ಚಿ ಮಾರನೆಯ ದಿನ ಕಣ್ದೆರೆದ ಕುಳ ಕಾಮಪ್ಪ ಜೇಲಿಗೆ ಹೋದೊಡನೆ ಆ ಮದುವೆಯನ್ನು ನಿಲ್ಲಿಸಿದ್ದ. ಆದರೆ ರತಿಯನ್ನು ಸೋಮಪ್ಪನಿಗೆ ಯಾಕೆ ಕೊಡಬಾರದು ಎಂಬ ವಿಷಯ ಚರ್ಚೆಗೆ ಬಂದು, ಹಾಗೆ ಮಾಡಲು ಅಡ್ಡಿ ಇಲ್ಲ ಎಂದು ನಿರ್ಣಯವಾಗುವಷ್ಟರಲ್ಲಿ ಕಾಮಪ್ಪ ಜೇಲಿನಿಂದ ಬಿಡುಗಡೆಯಾಗಿ ಬಂದ. ಬಂದವನೆ ಹಟ ಹೂಡಿದ, ರತಿಯು ಕಾಮಪ್ಪನಿಗೇ ಯೋಗ್ಯ ಬೇರೆ ಯಾವ ಅಪ್ಪನೂ ಆಕೆಯನ್ನು ವರಿಸಲಾರ ಎಂದು. ಆಗ ಸೋಮಪ್ಪನೂ ಹಟ ಹಿಡಿದ ರತಿಯೂ ಮಿಕ್ಕವರೂ ಒಪ್ಪುವಾಗ ಕಾಮಪ್ಪನ ಅಡ್ಡಿಯಾಕೆ—ಎಂದು. ಆಕೆಗಾಗಿ ತಾನು ಜೇಲಿಗೆ ಹೋಗಿ ಬಂದವನಲ್ಲವೆ—ಎಂದು ಕಾಮಪ್ಪ ವಾದಿಸಿದ. ಆದರೂ ಎಲ್ಲರೂ ಕೂಡಿ ಆಕೆಯನ್ನು ನನಗೆ ಒಪ್ಪಿಸಿಲ್ಲವೆ—ಎಂದು ಸೋಮಪ್ಪನ ಪ್ರತಿವಾದ. ತಾನು

ಆಗ ಪ್ರತ್ಯಕ್ಷವಾಗಿ ಇದ್ದಿರಲಿಲ್ಲವಾದ್ದರಿಂದ ಮಿಕ್ಕವರು ಒಪ್ಪಿದ್ದಾರೆ ಎಂದು ಕಾಮಪ್ಪ ತರ್ಕವನ್ನೆತ್ತಿದ. ಈಗ ನೀನು ಪ್ರತ್ಯಕ್ಷವಾಗಿ ಬಂದಿರುವೆಯಾದರೂ ಯಾರೂ ನಿನ್ನ ಹೆಸರನ್ನೆತ್ತುವುದಿಲ್ಲವಲ್ಲ—ಎಂದು ಸೋಮಪ್ಪ ಪ್ರತ್ಯುತ್ತರಿಸಿದ.

ತಮ್ಮ ಹಳ್ಳಿಗೆ ಈ ತರದ ಜಗಳ ತರವಲ್ಲ ಎಂದು ಕೆಲವರು ಹೇಳಹೋದಾಗ "ಇದು ನಮ್ಮ ಗೃಹಕಲಹ, ನೀವು ಬಾಯಿ ಹಾಕಬೇಡಿ" ಎಂದ ಕಾಮಪ್ಪ. "ಜಗಳವೆಲ್ಲಿಯದು? ಎಲ್ಲರೂ ನನ್ನ ಬಗ್ಗೆ ಸಮ್ಮತಿ ಕೊಟ್ಟಿದ್ದಾರೆ" ಎಂದ ಸೋಮಪ್ಪ. ಕೊನೆಗೆ ಊರವರು ಒಂದೆಡೆ ಸೇರಿ ಒಂದು ನಿರ್ಣಯಕ್ಕೆ ಬಂದರು. ಇವರನ್ನು ಇವರಷ್ಟಕ್ಕೆ ಬಿಟ್ಟರೆ ಒಳಿತಲ್ಲ, ಮನೆಯ ಹಿರಿಯರಿಗೆ ಹೇಳೋಣ ಎಂದುಕೊಂಡರು.

ಅಂತೂ ಒಂದು ದಿನ ಕಾಮಪ್ಪ–ಸೋಮಪ್ಪರ ಜಗಳ ಅವರ ಹೈಕಮ್ಯಾಂಡ್‌ನ ಎದುರು ಹೋಯಿತು. "ಈಕೇನ್ನೇ ಮದುವೆಯಾಗಬೇಕು ಅಂತ ಇಬ್ಬರದೂ ಹಟ ಯಾಕೆ? ನಿಂನಿಮ್ಮೊಳಗೆ ಗೊತ್ತುಮಾಡಿಕೊಳ್ಳಿರಿ ಯಾರು ಒಬ್ಬರು ಅನ್ನೋದನ್ನ. ಉಳಿದವನಿಗೆ ಈಕೆಗಿಂತ ಒಳ್ಳೇಯಾಕೇನ್ನ ತರಬಹುದು" ಎಂದಿತು ಹೈಕಮ್ಯಾಂಡ್.

"ಈಕೆಯನ್ನು ಮೊದಲು ನನಗೇ ಗೊತ್ತುಮಾಡಿತ್ತು ನನ್ನನ್ನೆ ವಂಚಿಸಿ ಈಕೆಯನ್ನು ತಾನು ವರಿಸಬೇಕೆಂದಿದ್ದಾನೆ ಸೋಮಪ್ಪ. ಬೇಕಾದರೆ ಇನ್ನೊಮ್ಮೆ ಈಕೆಯನ್ನೆ ಕೇಳಿನೋಡಿ" ಎಂದು ಕಾಮಪ್ಪ ಹಟದಿಂದಲೆ ಹೇಳಿದ.

"ತನಗೆ ದೊರಕಬೇಕಿದ್ದ ಈಕೆಯನ್ನು ತನ್ನ ದುರ್ಗುಣಕ್ಕಾಗಿ ತಾನಾಗಿಯೆ ಕಳೆದುಕೊಂಡಿದ್ದಾನೆ. ಮಿಕ್ಕವರೆಲ್ಲರೂ ಸೇರಿ ಈಕೆಯನ್ನು ನನಗೆ ವಹಿಸಿದ್ದಾರೆ. ಅವರ ಸರ್ವಾನುಮತದ ಆಜ್ಞೆಯನ್ನು ನಾನು ಧಿಕ್ಕರಿಸಲಾರೆ" ಎಂದು ಸೋಮಪ್ಪನೂ ಅಷ್ಟೆ ಹಟದಿಂದ ಹೇಳಿದ. ಅಷ್ಟರಲ್ಲಿ "ಈಕೆ"ಯನ್ನು ಕೇಳಿಯೂ ಆಗಿತ್ತು. ಯಾರಾದರೂ ತನಗೆ ಅಷ್ಟೆ ಎಂದು ಈಕೆ ಉತ್ತರ ಕೊಟ್ಟಿದ್ದಳು.

ಹೀಗೆ ಹೈಕಮ್ಯಾಂಡಿಗೂ ಬಗೆ ಹರಿಯದಂತಾಯಿತು ಬಿಕ್ಕಟ್ಟು. ಆದರೆ ಜೊತೆಗೆ, ಪಾಪ! "ಈಕೆ"ಯಾದ ರತಿ ನಿರರ್ಥಕವಾಗಿ ಸಂಸಾರಸುಖವನ್ನು ತಪ್ಪಿಸಿಕೊಂಡು ಬಳಲಬೇಕಾಯಿತೆಂಬುದು ಯಾರ ಲಕ್ಷ್ಯಕ್ಕೂ ಬಂದಿರಲಿಲ್ಲ. ಅಥವಾ ಯಾರಿಗೂ ಅದರ ಮಹತ್ವವೆ ಎನ್ನಿಸಿದ್ದಿಲ್ಲವೊ!

ಕಾಮಪ್ಪ–ಸೋಮಪ್ಪರ ಈ ಕುಸ್ತಿಯ ನಿರ್ಣಯ ಕಠಿಣ ಎಂಬುದು ಕೆಲವರಿಗೆ ಹೊಳೆಯಿತು. ಕಣಕ್ಕೆ ಇಳಿಯದೆಯೆ ನಿಂತಲ್ಲೆ ಸಡ್ಡು ಹೊಡೆಯುವಾಗ

ನಿರ್ಣಯವೆಲ್ಲಿಂದ ಬಂತು? ಅದಕ್ಕಾಗಿ ಊರವರೆಲ್ಲರೂ ನಿರ್ಣಯ ಬಹಾದ್ದೂರ ನೊಬ್ಬನನ್ನು ಶೋಧಿಸುತ್ತಿದ್ದಾರಂತೆ.

ಇಷ್ಟನ್ನು ಬರೆದ ಮೇಲೆ ಬಂದ ವಿಶೇಷ ತಂತಿಯಿಂದ ಅಂತಹ ಬಹಾದ್ದೂರನು ಸಿಕ್ಕಿದ್ದಾನೆಂದು ತಿಳಿಯುತ್ತಿದೆ.

ಇಷ್ಟಕ್ಕೆ ನಾವು ಲೇಖನಿಯನ್ನು ಕೆಳಗಿಡುವುದೊಳಿತು. ಯಾಕೆಂದರೆ, ಒಂದು ವೇಳೆ ಇದು ಅಚ್ಚಾಗಿ ಬರುವ ಮುಂಚಿತವೆ ನಿರ್ಣಯ ಪ್ರಕಟವಾದರೂ ಆಗ ಬಹುದಾಗಿದೆ.

ಪಾಪ! ರತಿಯ ಹಣೆಬರೆಹವೇನೊ! ಇಲ್ಲವೆ ಕಾಮಪ್ಪನ ಸಹವಾಸಕ್ಕಾಗಿ ಆಕೆಗೆ ಹೋಳೀಹುಣ್ಣಿಮೆ ಕಟ್ಟಿಟ್ಟಂತೆಯೆ ಆಗಿದೆಯೆ?

—ಶ್ರೀರಂಗ್.



“ ನಿಜವಾಗ್ಲು ನಾವು ಬುದ್ಧಿವಂತರು, ಚಿನ್ನದ ಮೆಡ್ಲ್ ತೊಗಳ್ಳಿಲ್ಲ,
ಇಲ್ದೇ ಹೋಗಿದ್ದ್ರೆ, ಸುಂಕದ ಇಲಾಖೆಯವ್ರು ಹಿಡಿದುಬಿಡ್ತಿದ್ರು ”

ಗಾಂಪರ ಗುಂಪು

“ ಕಮ್ಯೂನಿಸ್ಟರ ಊರಿನಲ್ಲಿ ”

ಅಯೋಧ್ಯಾರಾಣಿ ವಿಮಾನ ಪ್ರಾಗ್ ಪಟ್ಟಣದ ವಿಮಾನ ನಿಲ್ದಾಣದಲ್ಲಿ ಇಳಿದಾಗ “ಛಳಿರಪ್ಪ ಛಳಿಯೋ-ಮಳೆಯಮ್ಮ ಮಳೆಯೋ” ಎಂದು ಹಾಡುವಂತಾಗಿತ್ತು. ವಿಮಾನದಲ್ಲಿಯೇನೋ ಬೆಚ್ಚಗಿತ್ತು. ಆದರೆ ಗಾಂಪರೊಡೆಯರು ಕಿಟಕಿಯಲ್ಲಿ ನೋಡಿದಾಗ ಚಿಟಿ ಚಿಟಿ ಮಳೆ ಹಿಡಿದಿತ್ತು. ಗಡ ಗಡಿಸುವ ಕೊರೆವ ಚಳಿ ಗಾಳಿ ಸುಯ್ಯುತ್ತಿತ್ತು. ಬಣ್ಣ ಬಣ್ಣದ ಛತ್ರಿಗಳನ್ನು ಹಿಡಿದು ಕೆಂಪು ಲಂಗದ ಹುಡುಗಿಯರು ವಿಮಾನದ ಇಳಿ ಮೆಟ್ಟಿಲ ಬಳಿ ನಿಂತು ಒಬ್ಬೊಬ್ಬ ಪ್ರಯಾಣಿಕನಿಗೂ ಒಂದೊಂದು ಕೊಡೆ ಕೊಟ್ಟು ರೆಸ್ಟೋರಾದ ಬಳಿಗೆ ಕರೆದೊಯ್ಯುತ್ತಿದ್ದರು.

“ ಆಹಾ-ಮಂಕಾ ಈ ಅದ್ಭುತ ಸ್ವಾಗತ ಯಾವ ದೇಶದಲ್ಲೂ ಸಿಕ್ಕಲಿಕ್ಕಿಲ್ಲ-ಶ್ವೇತ ಛತ್ರಿಯಲ್ಲ ಕೆಂಪು ಛತ್ರಿ ನಂದಿಮಾಗಧರಲ್ಲ ಈ ಮಂಕ ಮಡೆಯರು-ಪುಷ್ಪಕ ವಿಮಾನದ ಬದಲು ಅಯೋಧ್ಯಾರಾಣಿ-ನಡೆಮುಡಿ ಬದಲು ಕೆಂಪು ಜಮಖಾನೆಯನ್ನೇ ಹರಡಿರುತ್ತಿದ್ದರು ಈ ಕಮ್ಯೂನಿಸ್ಟ ಜನ-ಗುರುಗಳಿಗೆ ರಾಜಮರ್ಯಾದೆ-ಗುರುಗಳೇ ಈ ಜೆಕ್ ಹುಡುಗಿಯರು ಎಷ್ಟು ದಷ್ಟ ಪುಷ್ಟವಾಗಿದ್ದಾರೆ, ಎಂತಹ ಮಾಟವಾಗಿ ಲಂಗ ನಾಯಿ ಕೊಡೆ ಹಾಗೆ ಹರಡಿಕೊಂಡಿದೆ-ಮುಖದಲ್ಲಿ ವಿನಯ, ಕಣ್ಣಲ್ಲಿ ಅದೇನು ಕಾಂತಿ–ಆಹಹ–ಧನ್ಯ ಧನ್ಯ ಜೆಕ್ಕೊಸ್ಲವೇಕಿಯದ ತರುಣ ವೃಂದವೇ ಇಂತಹ ತರುಣಿಯರನ್ನು ಹೊಂದಿದ ನೀವು ಧನ್ಯ ”

—ಎಂದು ಮುಠ್ಠಾಳನು ಬಂದು ವಿಮಾನದ ಇಳಿಮೆಟ್ಟಿಲ ಮೇಲಿನ ತುದಿಯಲ್ಲಿ ನಿಂತು ಪ್ರಾಗ್ ವಿಮಾನ ನಿಲ್ದಾಣವನ್ನು ನೊಟ್ಟ ಮೊದಲು ದಿಟ್ಟಿಸಿ ಉದ್ವಿಗ್ನನಾಗಿ ಹೇಳಿದ.

“ ಅದೇನು ಆತ ಅಷ್ಟು ಆನಂದದಿಂದ ಕೂಗುತ್ತಿದ್ದಾನಲ್ಲಾ ” ಎಂದು ಗಾಂಪರ ಗುಂಪಿನ ಹಿಂದೆಯೇ ಕ್ಯೂನಲ್ಲಿ ಇಳಿಯುತ್ತಿದ್ದ ಡಿಮಾಸ್ಕಸ್ಸಿನಲ್ಲಿ ಪರಿಚಿತನಾದ ಕಾಗದದ ಕಾರ್ಖಾನೆ ಕಮ್ಯೂನಿಸ್ಟ್ ಪ್ರವೀಣ ಮಂಕನನ್ನು ವಿಚಾರಿಸಿದ. ಮಂಕನು ಮುಠ್ಠಾಳನ ಉದ್ಗಾರವನ್ನು ಆ ಇಂಜಿನಿಯರಿಗೆ ವಿವರಿಸಿದಾಗ-ಆತ ಹೊಟ್ಟೆ ತುಂಬ ನಕ್ಕ. ತಾನು ಅಲ್ಲಿ ಇಳಿಯುವದಿದ್ದರೂ ಈ ಗಾಂಪರ ಗುಂಪಿನ ಜೊತೆಗೇ ರೆಸ್ಟೊರಾಗೆ ಬಂದು ಇದ್ದ ಅರ್ಧ ತಾಸನ್ನು ಇವರೊಡನೆ ಕಳೆದು ತಮ್ಮ ಊರಿನ ಪರಿಚಯ ಮಾಡಿಕೊಡಬೇಕೆಂದು “ ಈಗ ಬಂದೆ” ಎಂದು ಹೇಳಿ ಎಲ್ಲಿಗೋ ಹೋದ. ವಿಮಾನದಿಂದ ಇಳಿದು ಕಡೆಯ ಮೆಟ್ಟಿಲಿಂದ ಕಾಂಕ್ರೀಟ್ ನೆಲದ ಮೇಲೆ ಕಾಲಿಡು

ತ್ತಿದ್ದಂತೆಯೇ ನಾಯಿಕೊಡೆ ಲಂಗದ ತರುಣಿ ಕೊಡೆಯೊಂದನ್ನು ಮುಂದೆ ಹಿಡಿದಳು. ಮಂಕ ಆ ಹುಡುಗಿಯ ಮುಖ ನೋಡುತ್ತಾ ಕೊಡೆ ತೆಗೆದುಕೊಂಡು. ಹೊ! ಏನು ನಗೆ ಮೂಡಿತ್ತು ಆ ಮುಖದಲ್ಲಿ! ದೊಡ್ಡ ಗುಲಾಬಿ ಹೂವಿನಿಂದ ಮಲ್ಲಿಗೆ ಪರಿಮಳ ಬೀರಿದರೆ ಹೇಗಿರುತ್ತದೋ ಹಾಗಿತ್ತು ಆ ನಗು.

ಮಡೆಯ ಕೊಡೆಯನ್ನು ಪಡೆದು ಮುಂದೆ ಇದ್ದ ಗುರುಗಳಿಗೆ ಹಿಡಿದ. ಗಾಂಪರ ಗುಂಪು ಕಮ್ಯೂನಿಸ್ಟರ ಊರಿನ ವಿಮಾನ ನಿಲ್ದಾಣದ ಫಲಹಾರಮಂದಿರವನ್ನು ಹೊಕ್ಕಿತು. ಬಾಗಿಲೆದುರಿಗೇ ಆರೂವರೆ ಅಡಿ ಎತ್ತರದ ಮಿಲಿಟರಿಯನ್ನು ನೋಡಿ ಬೆಚ್ಚಿದರು. ದೊಡ್ಡ ಬಕೆಟ್ಟಿನಲ್ಲಿ ಬಿಸಿನೀರಲ್ಲಿ ಬಟ್ಟೆ ಅದ್ದಿ ಗೋಡೆಯ ಅಂಚನ್ನು ಒರೆಸುತ್ತಿದ್ದಳು ಒಬ್ಬ ವಯಸ್ಸಾದ ಹೆಂಗಸು. AII ಪ್ರಯಾಣಿಕರಿಗಾಗಿ ಮೀಸಲಾಗಿರಿಸಿದ ಮೇಜಿನ ಮುಂದೆ ಕೂತಾಗ ಆಕೆ ಈ ಪ್ರಾಣಿಗಳಾರು! ಎಂಬಂತೆ ನೋಡುತ್ತಾ ಓಣಿಯಂತಿದ್ದ ಗೋಡೆ ಪಕ್ಕದಲ್ಲಿನ ನೆಲಮಾಳಿಗೆ ಇಳಿದುಹೋದಳು.

ಮೆನು ಕಾರ್ಡು ಹಿಡಿದ ಹುಡುಗಿಯೊಬ್ಬಳು ಬಂದು “ಮಿಜಾಗುನುಶ್ಚ ಜೆಂತಲಮನ ಲ್ಯಾಗರ-ಜ್ಯೂಸ್ ಆರೆಂಜ್!” ಎಂದ ಹಾಗಾಯಿತು. ಗಾಂಪರ ಗುಂಪು ಮುಖ ಮುಖ ನೋಡಿತು. ಆಕೆ ಆಡಿದ್ದು ಆಸ್ಟ್ರೆಯವೊ? ಬಹೂಮಿಯದ್ದೋ ಜಿಕ್ಕೆರದೋ ಯಾವ ಭಾಷೆಯೋ ಆ ಜೇಸಸ್ಸನೇ ಬಲ್ಲ “Oh Jesus” ಎಂದರು ಗುರುಗಳು. ಜನರ ಸುಖವೇ ಚರ್ಚು ಜನರ ಮನವೇ ಕ್ರಿಶ್ಚಿಯಾನಿಟಿ ಎಂದು ನಂಬಿದ ಆ ಕಮ್ಯೂನಿಸ್ಟಿನಾಕೆ ಮತ್ತೆ ಏನೇನೋ ಅವರ ಭಾಷೆಯಲ್ಲಿ ಹೇಳಿದಳು. ಹೂಂ ಎಂಬಂತೆ ಇವರು ತಲೆ ಹಾಕಿದರು.

ಪಾವಿನ ಗಾಜಿನ ಲೋಟಾ ಒಂದು ಕೆಂಪು ಪಾನಿಯವನ್ನೊಳಗೊಂಡು ಮೇಜಿನ ಮೇಲೆ ಬಂದು ಕೂತಿತು. ರಷ್ಯನ್ನರು ತಮ್ಮ ತತ್ವದ ಪಾನೀಯವನ್ನು ಜಿಕ್ಕರಿಗೆ ಕುಡಿಸಿದ್ದಾಯಿತು, ಇನ್ನು ಈ ಜೆಕ್ಕರು ಅದೇ ಪಾನೀಯವನ್ನು ನಮಗೆ ಕುಡಿಸಿ ಕಮ್ಯೂನಿಸಂಮತ್ತು ತರಿಸಲು ಹೂಡಿದ ಒಳಸಂಚು ಇದಿರಬಹುದೇ ಎಂದು ಶಂಕೆಯಿಂದ ಆ ಎತ್ತರದ ಹೊಳೆವ ಗಾಜಿನ ಲೋಟಾವನ್ನು ಗಾಂಪರೊಡೆಯರು ದಿಟ್ಟಿಸಿದರು. ಮರುಳ ಆ ಪಾನೀಯವನ್ನು ಹೀರಿದ.

“ಗುರುಗಳೇ ಈ ಕಮ್ಯೂನಿಸ್ಟರು ಏನನ್ನೂ ವೃಥಾ ಹಾಳು ಮಾಡೋದಿಲ್ಲ ಅನ್ನೋದಕ್ಕೆ ಈ ಕಿತ್ತಳೇಹಣ್ಣಿನ ರಸವೇ ಸಾಕ್ಷಿ” ಎಂದ ಮರುಳ. ಗಾಂಪರ ಗುಂಪೆಲ್ಲಾ ರಸವನ್ನು ಹೀರಿ ನೋಡಿತು.

“ಸಿಪ್ಪೆಯನ್ನೂ ಸೇರಿಸಿ ಕಿವಿಚಿ ರಸ ಹಿಂಡಿದ್ದಾರೆ”-ಮಡ್ಡಿ.

“ಮಡೆಯಾ-ನಿನಗೆ ಹೇಗೆ! ರುಚಿ ಇಲ್ಲವೊ?” ಗುರುಗಳು.

“ಗುರುಗಳೇ ಕಿತ್ತಲೇಹಣ್ಣಿನ ರಸ ನಾನು ಕುಡಿದದ್ದು ನನಗೆ ಸಕತ್ ಖಾಯಿಲೆ ಆದಾಗ-ನಾಡಿ ಹಿಡಿದ ಡಾಕ್ಟರು ಕಿತ್ತಲೇ ರಸ ಕೊಡಲೇಬೇಕೆಂದು ಹಟ ಹಿಡಿದಾಗ

ನಮ್ಮಪ್ಪ-ಪ್ರೈಮರಿ ಸ್ಕೂಲ್ ಮೇಸ್ಟ್ರು-ಎಳೇಸಿಂಟಿ ರಸ ತೆಗೆದು ಬೆಲ್ಲ ಹಾಕಿ ಸೀ ಮಾಡಿ ಇದೇ ಕಿತ್ತಲೇ ರಸ ಎಂದು ಕುಡಿದದ್ದು ಜ್ಞಾಪಕ ಗುರುಗಳೇ-ಆದ್ದರಿಂದ ನಿಜವಾದ ಆರೆಂಜ್ ಜ್ಯೂಸ್ ಹೇಗಿರುತ್ತದೆಂದು ಇವತ್ತೇ ನನಗೆ ತಿಳಿದದ್ದು"-ಎಂದು ಮಡೆಯ ನಿಜವನ್ನು ತೋಡಿಕೊಂಡ. ಬಡವರಿಗೆ ಎಲ್ಲಿ ಕಿತ್ತಳೆ ರಸ?

ಮಂಕ ಹಾಗೇ ಕಿಟಕಿಯಲ್ಲಿ ನೋಡಿದ. ಜೆಕಿಸ್ಲೋವೇಕಿಯದ ವಿವೇಕಿಗಳು ಹೆಂಗಸರೆಂದು ಪಟ್ಟಾವಳಿ ಉಡಿಸಿ ನಡುಮನೆಯಲ್ಲಿ ಹಸೆ ಹಾಸಿ ಪೂಸಿ ಮಾಡುವವರಲ್ಲ-ಮೈಮುರಿಯ ಕೆಲಸ ತೆಗೆಯುವವರು ಎಂಬುದು ಅರಿವಾಯಿತು. ದೊಡ್ಡ ಪೆಟ್ರೋಲ್ ಲಾರಿಯಿಂದ ಠಣಕ್ಕನೆ ಹಾರಿ ಅಯೋಧ್ಯಾರಾಣಿಯ ರೆಕ್ಕೆಯನ್ನೇರಿ-ಪೆಟ್ರೋಲ್ ತುಂಬುತ್ತಿದ್ದವರು ಹೆಂಗಸರು. ವಿಮಾನದಿಂದ ಭಾರೀ ಪೆಟಾರಿಗಳನ್ನು ಇಳಿಸಿ ಸ್ಕೂಟರ್ ಗಾಡಿಗಳಿಗೆ ಹಾಕಿ ನಡೆಸಿಕೊಂಡು ಹೋಗುತ್ತಿದ್ದವರು ಹೆಂಗಸರು-ಲಾರಿಗಳನ್ನು ಬಿಡುತ್ತಿದ್ದವರು ಹೆಂಗಸರು.

"ಗುರುಗಳೇ ಈ ದೇಶದಲ್ಲಿ ಗಂಡಸರು ಕಡಿಮೆ ಇರಬಹುದು ನಮ್ಮ ಊರಲ್ಲಿ ಗಂಡು ಕೂಲಿಗಳು ಮಾಡುವ ಕೆಲಸಗಳನ್ನೆಲ್ಲಾ ಪ್ಯಾಂಟುಗಳನ್ನು ಹಾಕಿದ ಹೆಣ್ಣಾಳುಗಳೇ ಮಾಡುತ್ತಿದ್ದಾರೆ" ಎಂದು ಕೇಳಿದ ಮಂಕ.

"ಅಯ್ಯಾ ಮಂಕ ನನ ಮಗನೆ-ನಮ್ಮೂರು ಕಟ್ಟಡಗಳ ಕೆಲಸದಲ್ಲಿ ಕಲ್ಲು-ಮಣ್ಣು-ಗಾರೆ-ಮರಳು-ಹೊರುವ ಹೆಣ್ಣಾಳುಗಳು ಗಂಡಸರೇನು? ಇಲ್ಲಿ ಕಟ್ಟಡ ಕಟ್ಟೋ ಕೂಲಿ ಕೆಲಸ ಸಿಕ್ಕಿರಲಿಕ್ಕಿಲ್ಲ ಈ ಏರೋಡ್ರೊಮ್‌ನಲ್ಲಿ ಕೂಲಿಗೆ ಬಂದಿದ್ದಾರೆ ಬಿಡೋ"-ಎಂದು ಮಡೆಯ ಮಂಕನ ಪ್ರಶ್ನೆಯನ್ನು ಉತ್ತರಿಸಿದ. ಮಂಕನಿಗೂ ಅವನ ದೇಶದ ಅಸಂಖ್ಯಾತ ಹೆಣ್ಣು ಕೂಲಿಗಳ ಕಷ್ಟದ ಕೆಲಸ ನೆನಪಿಗೆ ಬಂದಿರಬೇಕು, ಅಯ್ಯೋ ಪಾಪ ಎಂದೆನ್ನುವಂತೆ ನಿಟ್ಟುಸಿರು ಬಿಟ್ಟ ಮತ್ತೊಂದು ವರಸೆ ಕಿತ್ತಳೆಹಣ್ಣು ರಸ ಕುಡಿದ.

"ಗುರುಗಳೇ ಸಿಪ್ಪೆಯ ಸಮೇತ ಈ ಹಣ್ಣಿನ ರಸ ತೆಗೆದಿರುವುದು ನೋಡಿದರೆ ಇದರ ಮಹತ್ವ ಬಹಳ ಇರಬೇಕು-ಸಿಪ್ಪೆ ಬಹಳ ಆರೋಗ್ಯಕರ ಇರಬೇಕು ..." ಮಡ್ಡಿ.

"ಹೌದು ಮಡ್ಡೀ-'ಹೇ ಫಲ್ಗುಣಾ! ಎಲ್ಲಾ ಫಲಗಳ ಪೌಷ್ಟಿಕ ಅಂಶವೂ ಅದರ ಸಿಪ್ಪೆಗಳಲ್ಲಿ ಇರುತ್ತದೆ'-ಎಂದು ಪಾಂಡವರು ವನವಾಸದಲ್ಲಿದ್ದಾಗ ಜಂಬುಕೇಶ್ವರ ಮುನಿ ಆಶ್ರಮದಲ್ಲಿ ದೊಡ್ಡ ಜಂಬೂ ಫಲವನ್ನು ಜಂಭದಿಂದ ಫಲುಗುಣನು ಕಿತ್ತು ಪೇಚಾಡಿದಾಗ ಇವರ ಪ್ರಾರ್ಥನೆಗೆ ಶ್ರೀಕೃಷ್ಣಪರಮಾತ್ಮ ಬಂದು ಹೇಳಿದ್ದು ಸುಳ್ಳೇ" -ಗುರು ಗಾಂಪರು.

"ಅಂದಮೇಲೆ ಜಿಗಸ್ಲೊವೇಕಿಯಕ್ಕೂ ಪಾಂಡವರು ವನವಾಸ ಕಾಲದಲ್ಲಿ ಭೆಟ್ಟಿ ಕೊಟ್ಟಿರಬಹುದಲ್ಲವೆ?....ಇದ್ದೀತಿ....ಇದ್ದೀತು"-ಮಡ್ಡಿ.

"ಗುರುಗಳೇ ಅದಕ್ಕೆ ಇರಬೇಕು ಬಾಳೆಹಣ್ಣು ತಿಂದ ಜನಕ್ಕಿಂತ ಅದರ ಸಿಪ್ಪೆ ತಿಂದ ದನಕ್ಕೇ ಬಲ ಹೆಚ್ಚು-ಅದೇ ಸಾಕು ಸಿಪ್ಪೆಗಳ ಸತ್ವತೋರಿಸಲಿಕ್ಕೆ-ಎಂದು ಹೇಳಿ

ಮರುಳ ಉಳಿದ ಹಣ್ಣಿನ ರಸ ಕುಡಿದು “ ಗುರುಗಳೇ ದ್ರಾಕ್ಷಾರಸ ಕುಡಿದರೇ ಕೈವಲ್ಯ ಕಾಣುವಾಗ ಇನ್ನು ಬರೀ ಅದರ ಸಿಪ್ಪೆಯನ್ನೇ ತಿಂದರೆ ಇನ್ನೆಷ್ಟು ಮಜವಾಗಿರ ಬಹುದು ! ” ಎಂದು ಕೇಳಿದ.

ಇಷ್ಟರಲ್ಲಿ ಇವರ ಗುಂಪಿದ್ದ ಮೇಜಿನ ಬಳಿ ಕಾಗದದ ಕಾರ್ಖಾನೆ ಪ್ರವೀಣ ಜೆಕ್ ಇಂಜಿನಿಯರ್ ಬಂದ. ಆತನ ಜೊತೆಗೆ ಗುರುಗಳ ಸ್ನೇಹಿತೆ ದೊರೆಸಾನಿಯೂ ಬಂದಳು. ಖಾಲಿ ಇದ್ದ ಕುರ್ಚಿಗಳನ್ನಾಕ್ರಮಿಸಿದರು.

“ ಜೆಕೊಸ್ಲೊವೇಕಿಯದ ಈ ಇಂಜಿನಿಯರಿಂದ ಅವರ ದೇಶದ ವಿಚಾರ ಕೇಳ ಬೇಕೂಂತ ಆಸೆ ಪಟ್ರಂತೆ ನಿಮ್ಮ ಯುಲ್‌ಬ್ರೆನ್ನರ್ ಮಹಾಶಯರು-ಅದನ್ನು ನಾನೂ ಕೇಳಲು ಬಂದೆ ” ಎಂದು ಕುರ್ಚಿಯನ್ನ ಆ ದೊರೆಸಾನಿ ಗುರುಗಳ ಪಕ್ಕಕ್ಕೆ ಎಳೆದು ಕೊಂಡಳು.

“ಹೌದು ನಮ್ಮೂರ ವಿಷಯ ಇವರಿಗೆ ಹೇಳಲೇಬೇಕು-ನಮಗೆ ಅವರ ದೇಶದ ವಿಷಯ ಹೇಳಬೇಕು-ನನ್ನ ಸಾಮಾನುಗಳನ್ನು ಕಳಿಸಿ ಬಂದೆ”-ಎಂದು ಆತನ ಮುಂದೂ ಬಂದ ಹಣ್ಣಿನ ರಸದ ಬಟ್ಟಲಿಗೆ ಕೈ ಹಚ್ಚಿದ. ಸುರ್ ಅಂದು ಹೀರಿ-ಮುಖ ಸೊಟ್ಟು ಮಾಡಿ ಬೇರರನಿಗೆ ಏನೋ ಜೆಕ್ ಭಾಷೆಯಲ್ಲಿ ಹೇಳಿದ. ಮರು ಕ್ಷಣವೇ ಅವನ ಮುಂದೆ ಬೀರಿನ ಬಾಟಲು ಬಂದು ಕೂತಿತ್ತು. ಬೀರಿನ ನೊರೆ ಯನ್ನು ಹೀರಿ ಆನಂದ ಪಟ್ಟುಕೊಂಡು “ ರಷ್ಯನರ ಸಹವಾಸವಾದ ಮೇಲೆ ನಾವು ಗಳೂ ಓಡ್ಕಾ ರುಚಿ ನೋಡುತ್ತಿದ್ದೇವೆ....”

“ ರಷ್ಯನರೇ ಇಲ್ಲಿ ಬಹಳವೇನು ? ” ಮಂಕ ಕೇಳಿದ.

“ ಹೋದ ಮಹಾಯುದ್ಧದಲ್ಲಿ ರಷ್ಯನರ ಸೇನೆ ಜೊತೆ ನಮ್ಮ ಪ್ರಗತಿಶೀಲ ಸೇನೆಯೂ ಹೊಡೆದಾಡಿ ಜರ್ಮನರನ್ನು ಬಡಿದಟ್ಟಿದ ಮೇಲೆ ನಮ್ಮದೇ ರಾಜ್ಯಾಂತ ಆದದ್ದು ” ಕಾಗದಪ್ರವೀಣ.

“ ಅಂದರೆ ಮೊದಲು ನಿಮ್ಮದಾಗಿರಲಿಲ್ವೇ ? ”–ಮಡ್ಡಿ.

“ ಅಯ್ಯೋ ಶಿವನೇ ಇದಕ್ಕೆ ಜೆಕೊಸ್ಲೊವೇಕಿಯಾನ್ನೊ ಹೆಸರು ಇತ್ತೆ ? ಬಹೂಮಿಯ-ಆಸ್ಟ್ರಿಯಾ ರಾಜರು-ಜರ್ಮನಿಯ ದುಡ್ಡಿದ್ದ ದೊಡ್ಡಪ್ಪಗಳು ಇಲ್ಲಿ ಭಾರೀ ಕಾರ್ಖಾನೆಗಳನ್ನ ಹೂಡಿದರು-ನಮ್ಮನ್ನ ಅಲ್ಲಿ ಕೂಲಿಗಳನ್ನಾಗಿ ಹೂಡಿದರು. ಅತ್ತ ದರಿ ಇತ್ತ ಪುಲಿ ಅಂದ ಹಾಗೆ ಮಧ್ಯಮವರ್ಗದ ತ್ರಿಶಂಕುಗಳು ಆಗಿದ್ದೆವು ನಾವು ... ‘ ಸೆಸ್ಕೊಸ್ಲೊ ವೆನ್ಸ್ಕಾ ರಿಪಬ್ಲಿಕಾ ’ ಅಂತ ಈಗಿರೋ ರಾಜ್ಯದ ಸ್ವರೂಪ ತಾಳ ಬೇಕಾದರೇ-ಅದೆಷ್ಟು ಬಾಂಬು–ಅದೆಷ್ಟು ನರಬಲಿ-ಅದೆಷ್ಟು ಅಪಘಾತ-ಶಿವಶಿವ” ಎಂದು ಆತ ಹೇಳಿದಾಗ—

“ ಅರೆ ! ಕಮ್ಯೂನಿಸ್ಟರಾಗಿ ಶಿವಶಿವ-ಅಂತ ಅಂತೀರಲ್ಲೀ ...” ಎಂದ ಮಡೆಯ.

“ ಹಹ–ನಾವು ಅಸ್ಲಿ ಬಿಡ್ಲಿ ಆಕ್ರೈಸ್ಟ್ ಅಥವ ನಿಮ್ಮ ಶಿವ ಇರೋದು ಸುಳ್ಳಾಗ ಲಾರದು-ಜನಶಕ್ತಿ-ಕೋ ಆಪರೇಟಿವ್ ಅಂದರೆ ಸಾಮೂಹಿಕ ಆಡಳಿತ ನಮ್ಮ ಜನದ ಆಸ್ತಿ ಹೆಚ್ಚಿಸಿದೆ-”

“ ಅಂದ್ರೇ ಬಾಯಿ ಬೀಗ ಹೊಡೆದುಕೊಂಡು-ಕೊಟ್ಟ ಕೆಲಸ ಮಾಡ್ಕೊಂಡು ಮೂದೇವಿ ಹಾಗಿರೋ ಕಮ್ಯೂನಿಸ್ಟರ ರಾಜ್ಯಕ್ಕಿಂತ-ಹೊಟ್ಟೆಗಿಲ್ಲದಿದ್ರೂ ಮಾತಿನ ಸ್ವಾತಂತ್ರ್ಯ-ಜುಟ್ಟಿಗೆ ಮಲ್ಲಿಗೆ ಹೂವಿನ ನಮ್ಮ ನಮ್ಮ ರಿಪಬ್ಲಿಕವೇ ವಾಸಿ

—ಎಂದು ಮಡ್ಡಿ ಕೂಗಾಡಿದಾಗ, ಗುರುಗಳು "ಮಡ್ಡೀ ತಲೆಹರಟೆ-ಬೇಡ-ನೀವುಗಳು ಕೆಲಸಕ್ಕಿಂತ ಮಾತಿನಲ್ಲಿ ಗಟ್ಟಿಗರೂಂತ ಗೊತ್ತು-ಈ ಪ್ರಾಗ್‌ನಲ್ಲೂ ಯಾಕೆ ನಿನ್ನ ಟೀಕಾಚಾರಿತನ!...." ಎಂದು ಗದುರಿದರು.

"Dont blow his head my dear Yulbrenner-ಅವನ ಮೇಲೆ ಕೋಪ-"–ಎಂದು ದೊರೆಸಾನಿ ಗುರುಗಳ Head ಸವರಿದಳು. ಅದೇ ಕೋಪದಲ್ಲಿ ಗಾಂಪರೊಡೆಯರು ಎದುರಿಗಿದ್ದ ಪಾನೀಯದ ಬಟ್ಟಲು ಖಾಲಿ ಮಾಡಿದರು. ಅದು ಕಮ್ಯೂನಿಸ್ಟಿನ ಬೀರ್ ಬಟ್ಟಲಾಗಿತ್ತು.

ಆ ಕಮ್ಯೂನಿಸ್ಟ್ ಇಂಜಿನಿಯರು ಮತ್ತೆ ತನ್ನ ದೇಶ ಹಿಟ್ಲರನ ಬಾಂಬು ಬಲ ಸಹಿಸಿದ ರೀತಿ-ಒಳಗೇ ಕ್ರಾಂತಿಕಾರ ಗುಂಪು ಹುಟ್ಟಿದ್ದು–ಜರ್ಮನರನ್ನು ಸದೆ ಬಡಿದದ್ದು ಹೇಳುತ್ತಾ ಬಂದು 1945ನೇ ಮೇ ತಿಂಗಳು ಒಂಭತ್ತನೇ ತಾರೀಖು ಸ್ಟಾಲಿನ್ನನು ಕಳಿಸಿದ ಕೆಂಪು ಸೇನೆ ಪ್ರಾಗ್ ಪಟ್ಟಣವನ್ನು ವಶಪಡಿಸಿಕೊಂಡು ಶಾಂತಿ ಸ್ಥಾಪನೆ ಮಾಡಿತು"–ಎಂದು ಹೇಳಿ "ಓಡ್ಕ ಒಂದು" ಎಂದ ಬೇರರಿಗೆ ಹೇಳಿದ.

ಇಷ್ಟು ಹೊತ್ತಿಗೆ ಗಾಂಪರ ಗುಂಪಿಗೆ ಆ ಕಮ್ಯೂನಿಸ್ಟಿನ ಬಗ್ಗೆ-ಮತ್ತೆ ಅನೇಕ ಹೊಡೆತಕ್ಕೆ ಸಿಕ್ಕ ಪ್ರಾಗಿನ ಬಗ್ಗೆ ಅನುಕಂಪ ಮತ್ತೆ ಅಭಿಮಾನ ಕೂಡ ಮೂಡಿ ಬಂತು. "ಭಾರತೀಯರ ಗುರುತಿಗಾಗಿ"–ಎಂದು ಗಾಂಪರೊಡೆಯರು ಒಳಜೇಬಿನಿಂದ ಒಂದು ಚಿಕ್ಕ ರುದ್ರಾಕ್ಷಿಸರ ತೆಗೆದು ಆತನ ಕೈಗೆ ಕೊಟ್ಟು ತಮ್ಮ ಪ್ರೀತಿ ವ್ಯಕ್ತಪಡಿಸಿಕೊಂಡರು.

ಹೊರಡುವ ಹೊತ್ತಾಗಲು ಎಲ್ಲರೂ ಎದ್ದರು. ಏರೋಡ್ರೋಮಿನ ಅಂಗಡಿಗೆ ಹೋದರು–ಮುದ್ದಾದ ಆಟಿಗೆಗಳು–ಕ್ಯಾಮರಾಗಳು–ಸಿಗರೇಟ್ ಲೈಟರ್‌ಗಳು. ತುಂಬಿದ್ದವು.

ಮಂಕ ಒಂದು ಕೆಂಪು ಆಟದ ಕುದುರೆ ಕೇಳಿದ. ಇವರ ಬಳಿ ಇದ್ದ ಇಂಡಿಯಾದ ರೂಪಾಯಿ ಅಲ್ಲಿ ಚಾಲ್ತಿ ಇಲ್ಲ ಎಂದಾಗ ಪೆಚ್ಚಾದ. "ಗುರುಗಳೇ ಆ ಕುದುರೆ ಸತ್ತುಹೋದ ನಮ್ಮ ಮಠದ ಕುದುರೇ ಹಾಗೇ ಇದೆ...." ಎಂದು ಪೇಚಾಡಿದ.

ಗಗನಸಖಿ ಬೆಟ್ಟೆ ಬಂದಳು. ಯಥಾಪ್ರಕಾರ ಮಂಕ ಅವಳನ್ನು ನೋಡಿ ನಕ್ಕ-ಆ ಹೆಂಗಸು ವಿಂಕೇ ಮಾಡಿಬಿಟ್ಟಳು. ಅದು ಚೇಷ್ಟೆ ಎಂದು ತಿಳಿಯದ ಮಂಕ ಬೆವೆತು ತಬ್ಬಿಬ್ಬಾದ. ಇಲ್ಲಿನ ತನಕ ಯಾವ ಹುಡುಗಿಯೂ ಹಾಗೆ ಮಾಡಿರಲಿಲ್ಲ. ವೆಂಕಟಲಕ್ಷ್ಮಿಯನ್ನು ನೆನೆದು "ಶ್ರೀನಿವಾಸಾ" ಎಂದ.

ಎಲ್ಲರನ್ನೂ ಆಕೆ ಮತ್ತೆ ಅಯೋಧ್ಯಾರಾಣಿಗೆ ಕರೆದೊಯ್ದಳು. ಕಮ್ಯೂನಿಸ್ಟನಿಗೆ ಸಲಾಂ ಹೊಡೆದು ಮತ್ತೆ ಹವಾಯ್ ಜಹಜು ಹತ್ತಿದರು. ಕೆಲವೇ ಮಿನಿಟುಗಳಲ್ಲಿ fasten your Beltಆಗಿ ವಿಮಾನ ಗಗನದಲ್ಲಿ ತೇಲುತ್ತಾ ಜರ್ಮನಿಯ ಡೂಸೆಲ್ ಡಾರ್ಫ್ ಕಡೆಗೆ ನಡೆಯಿತು. ಗಾಂಪರೊಡೆಯರ–ದೊರೆಸಾನಿಯ ಸ್ನೇಹ ಇನ್ನೂ ಬಲವಾಗಿತ್ತು-ಆಕೆ ಇವರ ಕೈಯಲ್ಲಿ ಕೈಹಾಕಿ ಕೂತಿದ್ದಳು. ಸಾಗಿತ್ತು ವಿಮಾನ.

—ದಾಶರಥಿದೀಕ್ಷಿತ್.

ತಾ|| 2–12–1960ರಿಂದ ಪ್ರದರ್ಶನ

ಬೆಂಗಳೂರು **ಸಾಗರ್ — ಮಿನರ್ವ**

ಮೈಸೂರು: ಮಂಗಳೂರು: ಚನ್ನಪಟ್ಟಣ:

ಪ್ರಭುದೇವ — ರಮಾಕಾಂತಿ — ಪಾರ್ವತಿ

ಹೊಸಪೇಟೆ: ಉಡುಪಿ:


ಶ್ರೀ ಗುರುಸಚ್ಚಿದಾನಂದ — ರಾಮಕೃಷ್ಣ ಥಿಯೇಟರ್

ಶಿವಮೊಗ್ಗ:

ಶ್ರೀ ಮಲ್ಲಿಕಾರ್ಜುನ ಮಂದಿರ್

ಮುಂದಿನ ಬದಲಾವಣೆ:

ತುಮಕೂರು: ವಿನೋದ, ದಾವಣಗೆರೆ: ಶಾಂತಿ ಪಿಕ್ಚರ್ ಹೌಸ್



ತಾರಾಗಣ:

ರಾಜಕುಮಾರ್ ● ಉದಯಕುಮಾರ್ ● ನರಸಿಂಹರಾಜು

ಹೆಚ್. ಆರ್. ರಾಮಚಂದ್ರಶಾಸ್ತ್ರಿ ● ಹನುಮಂತಾಚಾರ್


ಕೃಷ್ಣಕುಮಾರಿ ● ಜಯಶ್ರೀ ● ಲಕ್ಷ್ಮೀದೇವಿ ● ಬೇಬಿ ಸುಮಂಗಳಾ

ಕಥೆ, ಸಂಭಾಷಣೆ, ಹಾಡುಗಳು: **ಹುಣಸೂರು ಕೃಷ್ಣಮೂರ್ತಿ**

ನಿರ್ಮಾಪಕ: **ಡಿ. ಆರ್. ನಾಯ್ಡು**

ಸಂಗೀತ: **ಎಂ. ವೆಂಕಟರಾಜು,** ಛಾಯಾಗ್ರಹಣ: **ಮಧುಸೂದನನ್**

ಕರ್ನಾಟಕ ಫಿಲಂಸ್ ಹಂಚಿಕೆ. —ಕಟಕ.—



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು:

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3

REG. NO. B. G. 343 KORAVANJI DEC. 1960.

Printed by B S. Iyengar, Bangalore City.

Publisher—B N. Gupta. Editor—M. Sivaram.